K. T 91-97

G. R. S. IX-5]

Banking

Previous references.

File No. 2 J 189

1914.

Serial Nos. 1

(Banking)

Later references.

File No 2 R-1894
SL 46 — 1-2

GENERAL AND REVENUE SECRETARIAT.

Serial Nos.

M Part B for April 1898

SUBJECT.

Agricultural Bank at Pallavalli, Srikakulam Taluk

Indexed

W D 88—GPB—50,000—24-7-16

Banking
LOV.94
Files 2 & 1894
9 Code — 1-4

PAPERS



THE FORMATION

OF

AGRICULTURAL BANKS

IN MYSORE

BANGALORE
MYSORE GOVERNMENT CENTRAL PRESS
1894

(14)

ಮೈಸೂರಲ್ಲಿ ವ್ಯವಸಾಯಬ್ಯಾಂಕುಗಳ ವಿಷಯಕ್ಕೆ ಸಂಬಂಧಪಟ್ಟ ಕಾಗದಗಳು.

ಮೈಸೂರಲ್ಲಿ ವ್ಯವಸಾಯಬ್ಯಾಂಕುಗಳ ಏರ್ಪಾಡಿಗೆ ಸಂಬಂಧಪಟ್ಟ ಕಾಗದಗಳು.

ಮೈಸೂರು ಶ್ರೀಮನ್ಮಹಾರಾಜರವರ ಸರ್ಕಾರದ ಪ್ರೊಸೀಡಿಂಗ್ಸ್.

ಮೈಸೂರು ಡಿಪ್ಯುಟಿ ಕಮ್ಮಿಷನರು ಮೈಸೂರು ೀವೆಯು ದಿವಾನರವರ ಚೀಫ್ ಸೆಕ್ರಿಟೆರಿಯವರಿಗೆ ಬರೆಸಿದ ಈ ಕೆಳಗೆ ಕಂಡ 1894ನೇ ಇಸವಿ ನವಂಬರ್ 22ನೇ ಮಕ್ಕುಂ 536ನೇ ನಂಬರ್ ಲೆಟರ್ ಓದಲಾಯಿತು :—

"ನಾನು ವಿಜ್ಞಾಪಿಸುವದೇನೆಂದರೆ, ಕಳೆದ ದಸರಾ ಉಪನ್ಯಾಸದಲ್ಲಿ ದಿವಾನರವರು ತೋರಿಸಿ ಕೊಟ್ಟಿರುವ ಕ್ರಮವನ್ನನುಸರಿಸಿ ಶ್ರೀರಂಗಪಟ್ಟಣದ ತಾಲ್ಲೂಕು ಪಾಲಹಳ್ಳಿಯಲ್ಲಿರತಕ್ಕ ಗೌರವಸ್ಥರಾದ ರೈತರಪೈಕಿ ಕೆಲವರು, ಒಂದು ವ್ಯವಸಾಯದ ಬ್ಯಾಂಕನ್ನು ಏರ್ಪಾಟು ಮಾಡಬೇಕೆಂತ ನಿಶ್ಚಯಿಸಿರುತ್ತಾರೆ. ಅವರು ಮೊನ್ನೆ 18ನೇ ತಾರೀಖಿನಲ್ಲಿ ಪಾಲಹಳ್ಳಿಯಲ್ಲಿ ಮಿಾಟಿಂಗ್ ಸೇರಿ, ಬ್ಯಾಂಕನ್ನು ಏರ್ಪಾಟು ಮಾಡುವದಕ್ಕೆ ವಿಕವಾಕ್ಯತೆಯಿಂದ ನಿಶ್ಚಯಿಸಿ ಅದೇ ಮಿಾಟಿಂಗಿನಲ್ಲಿ ಅಸೋಸಿಯೇಷ್ಯನ್ ಮೆಮೋರಾಂಡಂ ಮತ್ತು ರೂಲ್ಸನ್ನು ಸ್ವೀಕರಿಸಿದರು. ಇದು ಆಡಗಿರುವ ಮತ್ತು ಮೆಂಬರುಗಳೆಲ್ಲರಿಂದಲೂ ರುಜು ಮಾಡಲ್ಪಟ್ಟಿರುವ ನಡವಳಿಕೆಗಳನ್ನು ಇದರ ಸಂಗಡ ಕಳುಹಿಸಿರುತ್ತೆ.

2. ಈಗ ರಿಜಿಸ್ಟರ್‌ನಲ್ಲಿ ದಾಖಲಾಗಿರತಕ್ಕ ಮೆಂಬರುಗಳು 16 ಮಂದಿ ಇದಾರೆ. ಪ್ರತಿಯೊಬ್ಬ ಮೆಂಬರಿಗೂ 1,000 ರೂಪಾಯಿಗೆ ಜಾಸ್ತಿ ಇಲ್ಲದೆ ಸಾಲ ಕೊಡುವದಕ್ಕೆ ರೂಲ್ಸಿನಲ್ಲಿ ಅವಕಾಶ ಕೊಟ್ಟಿರುತ್ತೆ. ಇದಕ್ಕೆ ಸೇರುವ ಪ್ರತಿಯೊಬ್ಬ ಮೆಂಬರೂ ಜಂಜಿ ವಿ ನಾಲ್ಕಾಣೆ ಪ್ರವೇಶಧನವನ್ನು ಕೊಡತಕ್ಕದ್ದೆಂತ ಗೊತು ಮಾಡಿರುತ್ತೆ. 100 ರೂಪಾಯಿಗೆ ಜಾಸ್ತಿ ಇಲ್ಲದೆ ಹಣವನ್ನು ಸಾಲ ತೆಗದುಕೊಂಡರೆ ಅದಕ್ಕೆ ಸಾಲಿಯಾನಾ 100ಕ್ಕೆ 7 ರೂಪಾಯಿ ಪ್ರಕಾರವೂ, ಅದಕ್ಕೆ ಜಾಸ್ತಿಯಾಗಿ ಸಾಲ ತೆಗದುಕೊಂಡರೆ ಅದಕ್ಕೆ ಶೇಕಡ 6 ರೂಪಾಯಿ ಪ್ರಕಾರವೂ ಬಡ್ಡಿಯನ್ನು ಸಾಲ ತೀರಿಸುವ ಕಾಲದಲ್ಲಿ ಕೊಡತಕ್ಕದ್ದೆಂತ ನಿಬಂಧನೆಯಾಗಿದೆ. ಬಾಕಿ ವಿಷಯಗಳಲ್ಲೆಲ್ಲಾ ಈ ರೂಲ್ಸು ಮತ್ತು ದಸರಾ ಉಪನ್ಯಾಸದ ಸಂಗಡ ಮಿಂಬರುಗಳಿಗೆ ಕೊಟ್ಟ ಕನ್ನಡದ ಮಸವಿದೆ ರೂಲ್ಸು ಒಂದೆ ಆಗಿರುತ್ತವೆ. ಈ ಮೆಂಬರುಗಳು ಗೌರವಸ್ಥರೆಂತಲೂ ಹಣವಂದಿಗರೆಂತಲೂ, ಅಪಾಯವಿಲ್ಲದೆ ಇವರಿಗೆ 16,000 ರೂಪಾಯಿ ಸಾಲ ಕೊಡಬಹುದೆಂತಲೂ ಅಮಲೆದಾರ್ರು ರಿಪೋರ್ಟು ಮಾಡಿದಾರೆ.

3. ರಿಜಿಸ್ಟರ್ ಆಗತಕ್ಕ ಬಗ್ಗೆ ಜಾಯಿಂಟ್ ಸ್ಟಾಕ್ ಕಂಪನಿ ರಿಜಿಸ್ಟ್ರಾರಿಗೆ ನಡವಳಿಕೆಗಳನ್ನ ಕಳುಹಿಸಿಕೊಡಬೇಕೆಂತಲೂ ಬ್ಯಾಂಕನ್ನು ಸ್ಥಾಪಿಸುವದಕ್ಕೂ ಈ ಬ್ಯಾಂಕಿಗೆ ಎಂದಿಗೂ ಒಟ್ಟಿನ ಮೇಲೆ 16,000 ರೂಪಾಯಿಗೆ ಜಾಸ್ತಿ ಇಲ್ಲದೆ ಆಗಾಗ್ಯೆ ಸರ್ಕಾರದವರು ಸಾಲ ಕೊಡುವದಕ್ಕೂ ಅಪ್ಪಣೆಯಾಗಬೇಕೆಂತ ಬೇಡುತ್ತೇನೆ.

4. ಉಪನ್ಯಾಸದಲ್ಲಿ ವಾಗ್ದಾನ ಮಾಡಿರುವ ಮೇರಿಗೆ ಸ್ಟ್ಯಾಂಪು, ರಿಜಿಸ್ಟ್ರೇಷ್ಯನ್ ವಗೈರೆ ಫೀಗಳನ್ನು ಮೊಫ್ ಮಾಡಿ ಕ್ಲುಪ್ತ ಕಾಲಗಳಲ್ಲಿ ಸರ್ಕಾರ್ ನೌಕರರು ಈ ಲೆಖ್ಖಗಳನ್ನ ನೋಡುವ ಹಾಗೆ ಸರ್ಕಾರದವರು ಸಹಾಯ ಮಾಡಬೇಕೆಂತಲೂ ಬೇಡಿಕೊಳ್ಳುತ್ತೇನೆ.

ಈ ವರ್ಷದ ದಸರಾಮಿಾಟಿಂಗಿನಲ್ಲಿ ಅಗ್ರಿಕಲ್ಚರಲ್ ಬ್ಯಾಂಕ್ ವಿಷಯವಾಗಿ ಮಾ|| ರಾ|| ದಿವಾನ್ ಸಾಹೆಬರವರು ಅಪ್ಪಣೆ ಕೊಟ್ಟ ಪ್ರಕಾರ ರೂಲ್ಸಾಗಿ ಮೈಸೂರು ಗೆಜೆಟಿನಲ್ಲಿ ಛಾಯಿಪ್ಯಾಡಿರುವದಕ್ಕನುಸಾರವಾಗಿ ಶ್ರೀರಂಗಪಟ್ಟ ತಾಲ್ಲೂಕು ಪಾಲಹಳ್ಳಿಗ್ರಾಮದಲ್ಲಿ ವ್ಯವಸಾಯದ ಬ್ಯಾಂಕು ಸ್ಥಾಪಿಸಲು ಸದರಿ ಪಾಲಹಳ್ಳಿಗ್ರಾಮದಲ್ಲಿ 1894ನೇ ಇಸವಿ ನವಂಬರು 18ರಲ್ಲು ಮಾಡಲ್ಪಟ್ಟ ಮಿಾಟಿಂಗ್ ಯಾನೆ ಸಮಾಖ್ಯೆಪತ್ರಿಕೆ.

ಹಾಜರಿದ್ದ ಮೆಂಬರುಗಳ ಸಂಖ್ಯೆ 16.

ಈ ಸಭೆಗೆ ವ.|| ರಾ|| ಸಾಹುಕಾರ್ ಪಾಪಣ್ಣನವರು ಅಗ್ರಾಸನಾಧಿಪತಿಗಳಾಗಬೇಕೆಂದು ಮಾ|| ರಾ|| ವೆಂಕಟ ಕೃಷ್ಣಪ್ಪನವರು ಹೇಳಿದ್ದನ್ನು ಎಲ್ಲರೂ ಒಪ್ಪಿದರು.

1. ಹೆಸರು.—ಮೈಸೂರು ಡಿಸ್ಟ್ರಿಕ್ಟು ಶ್ರೀರಂಗಪಟ್ಟ ತಾಲ್ಲೂಕು ಪಾಲಹಳ್ಳಿ ವ್ಯವಸಾಯಾಭಿವೃದ್ಧಿ ಬ್ಯಾಂಕ್ ಎಂದು ಕರೆಯಲ್ಪಟ್ಟು ಮೈಸೂರುಪೇಮೆಯ ಜಾಯಿಂಟ್ ಸ್ಟಾಕ್ ರಿಜಿಸ್ಟ್ರಾರ್ ಆಫಿಸ್‌ನಲ್ಲಿ 66ನೇ ಇಸವಿ 10ನೇ ನಂಬರು ಇಂಡಿಯನ್ ಕಂಪನೀಸ್ ಆಕ್ಟಿಗೆ ಅನುಸಾರವಾಗಿ ರಿಜಿಸ್ಟರ್ ಮಾಡಲ್ಪಟ್ಟು ಈ ನವಂಬರು 19ನೇ ತಾರೀಖಿನಿಂದಾ ಜಾರೀಯಲ್ಲಿ ಬರತಕ್ಕದ್ದು.—ಒಪ್ಪಿದರು.

2. ಆರ್ಟಿಕಲ್ಸ್ ಆಫ್ ಅಸೋಸಿಯೇಷ್ಯನ್ ಎಂದರೆ ಸಮಾಖ್ಯೆದ ಪತ್ರಿಕೆಯಲ್ಲಿ ರುಜು ಹಾಕಿರತಕ್ಕ ಜನಗಳು ಈ ಬ್ಯಾಂಕಿನ ಮೆಂಬರುಗಳಾಗಿ ಇರತಕ್ಕದ್ದು.—ಒಪ್ಪಿದರು.

3. ಮೆಂಬರುಗಳ ಸಂಖ್ಯೆ ಪ್ರಕೃತ 16 ಜನಗಳಾಗಿ ಇರತಕ್ಕದ್ದಾಗಿಯೂ ಮುಂದೆ ಈ ರೂಲ್ಸು ಅನುಸರಿಸಿ ಸೇರುವದಕ್ಕೆ ಲಾಯಖು ಎಂದು ಮೆಂಬರುಗಳು ಅಭಿಪ್ರಾಯ ಪಡುವ ಇತರರು ಸಹ ಸೇರಬಹುದೆಂತಲೂ ನಿಷ್ಕರ್ಷೆಮಾಡಿದೆ.—ಒಪ್ಪಿದರು.

4. ಈ ಸಂಘಕ್ಕೆ ಈಗ ಸೇರಿರುವ ಮತ್ತು ಮುಂದೆ ಸೇರತಕ್ಕ ಪ್ರತಿ ಒಬ್ಬ ಮೆಂಬರೂ ಪ್ರತ್ಯೇಕ ದ್ರವ್ಯವೆಂದು 4 ಆಣೆ ಪ್ರವೇಶ ಲಿಖಿತ ಮೂಲಕ ಅಪ್ಲಿಕೇಷನ್ ಕೊಡುವದರ ಮೂಲಕ ಸೇರತಕ್ಕದ್ದು.—ಒಪ್ಪಿದರು.

5. ಬ್ಯಾಂಕಿನ ಆಡಳಿತ ನಡಿಸಲು ಸಂಘದ ಮೆಂಬರುಗಳ ಪೈಕಿ 5 ಜನಗಳನ್ನು ಡೈರಕ್ಟರುಗಳಾಗಿ ಸಂಘದ ಮೆಂಬರುಗಳ ಜನರಲ್ ಮೀಟಿಂಗಿನಲ್ಲಿ ಚುನಾಯಿಸಿ ಕೊಳ್ಳುವದಲ್ಲದೆ ಇವರುಗಳ ಮೇಲ್ವಿಚಾರಣೆ ಬಗ್ಗೆ ಪ್ರಕೃತ 5 ಜನಗಳ ಲಾಗಾಯಿತು 6 ಜನಗಳ ವರಿಗೆ ಕೌನ್ಸಿಲರ್ ಮೆಂಬರಾಗಿ ಚುನಾಯಿಸತಕ್ಕದ್ದು.—ಒಪ್ಪಿದರು.

6. ಆಡಳಿತ ನಡಿಸತಕ್ಕ ವಿಧಾನ.—ಬ್ಯಾಂಕಿನ ನಿಬಂಧನೆಗಳನ್ನು ಅನುಸರಿಸಿ ಕೌನ್ಸಿಲರ್‌ಗಳು ಮಾಡುವ ಏರ್ಪಾಡಿನಂತೆ ಡೈರೆಕ್ಟರುಗಳು ಕೆಲಸ ನಡಿಸತಕ್ಕದ್ದು.—ಒಪ್ಪಿದರು.

7. ಡೈರೆಕ್ಟರ್ ಪೈಕಿ ಮೂರುಮಂದಿ ಕ್ವಾರಮ್ ಪೈಕಿ ಐದು ಮಂದಿಗೆ ಕಡಮೆಯಿಲ್ಲದ್ದಕ್ಕೆ ಕೋರಂ ಆಗಿ ಇರತಕ್ಕದ್ದು. ಡೈರೆಕ್ಟರುಗಳು ವಾರಕ್ಕೆ ಎರಡಾವರ್ತಿ ಕಮ್ಮಿ ಇಲ್ಲದಂತೆ ಬ್ಯಾಂಕ್ ಹೌಸಿಗೆ ಬಂದು ಬ್ಯಾಂಕಿನ ಎಲ್ಲಾ ಒಟ್ಟಿನ ಕೆಲಸಗಳನ್ನೂ ತನಿಖೆ ಮಾಡಿ ಮಿನಿಟ್ ಬುಕ್ಕಿನಲ್ಲಿ ಪರಾ ಬರಿಯತಕ್ಕದ್ದು. ಕೌನ್ಸಿಲರ್‌ಗಳು ತಿಂಗಳಿಗೆ ಬಂದಾವರ್ತಿ ಮೇಲ್ವಿಚಾರಣೆ ಕೆಲಸ ಅಂದರೆ ಕಳೆದ ಮೀಟಿಂಗಿನಿಂದ ಈಚೆಗೆ ನಡೆದ ವಿಷಯ ಲೇವಾದೇವಿಯನ್ನೂ ತನಿಖೆಮಾಡಿ ಮುಂದೆ ನಡಿಯತಕ್ಕ ಅಮಲ್‌ಗಳಿಗೆ ತಕ್ಕ ಸಲಹಗಳನ್ನು ಬರಿಯತಕ್ಕದ್ದು.—ಒಪ್ಪಿದರು.

8 ಈ ಸಂಘದ ಕೆಲಸ. —ಸರ್ಕಾರದಿಂದ ಸಾಲಿಯಾನ ಶೇಕಡ ನಾಲ್ಕು ರೂಪಾಯಿನ ದರದ ಬಡ್ಡಿಯಂತೆ ಸಾಲವಾಗಿ ಕೊಡಲ್ಪಡುವ ಡಿಪಾಜಿಟ್ ಮೊಬಲಗಿನಿಂದಲೂ ಈ ಸರ್ಕಾರದಂತೆ ಬ್ಯಾಂಕಿನ ಬಡ್ಡಿಯನ್ನ ತೆಗದು ಕೊಳ್ಳಲು ಒಪ್ಪಿ ಇತರರು ಕೊಡುವ ಡಿಪಾಜಿಟ್ ಮೊಬಲಗಿನಿಂದಲೂ ಬ್ಯಾಂಕಿನ ಲೇವಾದೇವಿಯು ನಡಿಸಲ್ಪಡತಕ್ಕದ್ದು.—ಒಪ್ಪಿದರು.

9. ಲೇವಾದೇವಿ ಕ್ರಮ.—ಈ ಸಂಘದಲ್ಲಿ ಸೇರಿರುವ ಮೆಂಬರ್‌ಗಳಲ್ಲಿಯೇ ಈ ಕೆಳಗೆ ನಮೂದಿಸುವ ರೀತಿ ಲೇವಾದೇವಿ ನಡಿಸತಕ್ಕದ್ದು. ಮತ್ತು ಕೊಟ್ಟ ಸಾಲ ವಾಪಸ್ ಪಡಿಯುವ ಕಾಲದಲ್ಲಿ ಪೂರಾ ಬಡ್ಡಿಯನ್ನು ವಸೂಲ್ಮಾಡಿಕೊಳ್ಳತಕ್ಕದ್ದು.

1 ಸ್ಥಿರಾಧಾರ.
2 ಜಾಯಿಂಟ್ ಪ್ರಾಮಿಸರಿ.
3 ಜಾಯಿಂಟ್ ಕಂತು.
4 ಮುಖಾದಲೆ.

ಈ ಮೇರೆ ನಾಲ್ಕು ವಿಧವಾಗಿ ಇರತಕ್ಕದ್ದು.—ಒಪ್ಪಿದರು.

10. 1—3ನೇ ಕಲಮಿನಂತೆ ಕೊಡತಕ್ಕ ಸಾಲಕ್ಕೆ ಸಾಲಿಯಾನಾ ಶೇಕಡಾ 6 ರೂಪಾಯಿನಂತೆಯೂ 2ನೇದಾದ ಜಾಯಿಂಟ್ ಪ್ರಾಮಿಸರಿಗೆ ಒಂದುನೂರು ರೂಪಾಯಿನೊಳಗೆ ಇದ್ದಲ್ಲಿ ಶೇಕಡಾ 7 ರೂಪಾಯಿನಂತೆಯೂ ಅದಕ್ಕೆ ಜಾಸ್ತಿ ಆಗಿಯಿದ್ದಲ್ಲಿ ಶೇಕಡಾ 6 ರೂಪಾಯಿನಂತೆಯೂ 4ನೇದಾದ ಮುಖಾದಲೆ ಮೊಬಲಗಿಗೆ ದಿನ 1ಕ್ಕೆ 20 ರೂಪಾಯಿಗಳಿಗೆ ಒಂದು ಪೈನಂತೆಯೂ ಬಡ್ಡಿ ವಸೂಲ್ಮಾಡತಕ್ಕದ್ದು.—ಒಪ್ಪಿದರು.

11. ಇದರಲ್ಲಿ ಸ್ಥಾವರ ಸ್ವತ್ತುಗಳ ಆಧಾರದಮೇಲೆ ಅಥವಾ ಜವಿಾನಿನಮೇಲೆ ಒಬ್ಬ ಆಸಾಮಿಗೆ 1,000 ರೂಪಾಯಿಗಳಿಗೆ ಜಾಸ್ತಿ ಇಲ್ಲದಂತೆ 15 ತಿಂಗಳವಾಯಿದೆಗೆ ವಿಾರದೆ ಸಾಲಾಕೊಡಬಹುದು. ಸ್ವತ್ತಿನ ಅಂದಾಜಾಪೈಕಿ $\frac{3}{4}$ ಭಾಗಕ್ಕೆ ಹೆಚ್ಚದಂತೆ ಸಾಲಾ ಕೊಡತಕ್ಕದ್ದು.—ಒಪ್ಪಿದರು.

12. ಪ್ರಾಮಿಸರಿ.—ಲೇವಾದೇವಿಯಲ್ಲಿ ಮೇಲ್ಕಂಡಂತೆ ಹಣತೆಗದುಕೊಳ್ಳತಕ್ಕ ಆಸಾಮಿಯಿಂದ ಖಾತರಿ ಜಾಮೀನ್ತೆಗದು ಕೊಂಡು 1,000 ರೂಪಾಯಿಗೂ 6 ತಿಂಗಳ ವಾಯಿದೆಗೂ ವಿಾರದಂತೆ ಸಾಲಾಕೊಡಬಹುದು.—ಒಪ್ಪಿದರು.

13. ಕಂತು.—ಸ್ಥಿರಾಧಾರದ ಕಂತು ಯಾ ಜಾಯಿಂಟ್‌ಗಳ ಮೇಲೆ ತೆಗಿಯಲ್ಪಡುವ ಕಂತುಗಳಲ್ಲಿ 500 ರೂಪಾಯಿನ ವರಿಗೆ ಹತ್ತು ಕಂತುಗಳಿಗೆ ವಿಾರದಂತೆ ಲೇವಾದೇವಿ ನಡಿಸತಕ್ಕದ್ದು.—ಒಪ್ಪಿದರು.

14. ಮುಖಾದಲೆ.—ಫೀ ಇಸಂಗೆ ಯಾ ಜಂಟಿಗಳಿಗೆ 25 ರೂಪಾಯಿಗಳಿಗೂ 90 ರೋಜಿನ ವಾಯಿದೆಗೂ ವಿಾರದಂತೆ ಸಾಲಾ ಕೊಡಬಹುದು. ಯಾವ ಸಾಲವನ್ನು 15 ತಿಂಗಳಿಗೆ ವಿಾರದಂತೆ ಕೊಡಬಹುದು ಯಾ ರಿನ್ಯೂವಾಡಬಹುದು.—ಒಪ್ಪಿದರು.

15. ಯಾವಮೆಂಬರಿನ ಜವಾಬ್ದಾರಿಯು ಅವನು ಕೊಡತಕ್ಕ ಸಾಲದ ಮೊಬಲಗು ಮತ್ತು ಇತರರಿಗಾಗಿ ಜಾಮೀನಾಗಿರುವ ಮೊಬಲಗು ಸೇರಿ (2,000) ಎರಡು ಸಾವಿರ ರೂಪಾಯಿಗಳಿಗೆ ವಿಾರಕೊಡದು.—ಒಪ್ಪಿದರು.

16. ಸಾಲಾಪಡಿಯತಕ್ಕ ಕ್ರಮ.—ಸಾಲಾಪಡಿಯತಕ್ಕ ಮೆಂಬರು ಲಿಖಿತಮೂಲಕವಾಗಿಯೇ ಆಗಲಿ ಜಾಬಾನಿಯಾಗಿಯೇ ಆಗಲಿ ಡೈರೆಕ್ಟ್ರರಗಳಲ್ಲಿ ಸಾಲಕ್ಕೆ ದರಖಾಸ್ತು ಮಾಡಬಹುದು. ಅಂಥಾ ಹೇಳಿಕೆಗಳನ್ನ ಡೈರೆಕ್ಟರುಗಳು ನೋಟ್‌ಮಾಡಿಕೊಳ್ಳುವದರಲ್ಲಿ ಸದರಿ ಸಾಲವು ಯಾವ ಕೆಲಸಕ್ಕಾಗಿ ತೆಗೆದುಕೊಳ್ಳಲ್ಪಡುತ್ತೆ ಎಂಬದನ್ನೂ ಇವನ ಮತ್ತು ಜಾಮೀನ್‌ದಾರನ ಯೋಗ್ಯತೆ ಆಹವಾಲ್ ಮುಂತಾದ್ದನ್ನೂ ಸಹ ಸರಿಯಾಗಿ ವಿಸರಿಸಬೇಕು.—ಒಪ್ಪಿದರು.

17. ಸಾಲಾ ತೆಗೆದುಕೊಳ್ಳುವವನು ಮತ್ತು ಜಾಮೀನ್‌ದಾರನು ಸಹಾ ತಮ್ಮ ಖಾತರ್‌ದಾರಿ ಆಸ್ತಿ ಮುಂತಾದ ತಪ್ಶೀಲ್‌ಗಳನ್ನು ಡೈರೆಕ್ಟರುಗಳು ಕೇಳಿದ್ದಾಗ್ಯೆನಿಜವಾಗಿ ಹೇಳಬೇಕು. ಇದರಲ್ಲಿ ಏನಾದರು ಸುಳ್ಳು ಅಥವಾ ಲೋಪಬಂದ ಪಕ್ಷದಲ್ಲಿ ಅವರು ಜವಾಬ್ದಾರ್ಯಾಗಿರತಕ್ಕದ್ದು. ಇದರ ನಿಜತ್ವದ ವಿಚಾರದಲ್ಲಿ ಡೈರಕ್ಟರುಗಳು ಸಾಧ್ಯವಾದ ಮಟ್ಟಿಗೆ ವಿಚಾರಮಾಡಿ ಸಾಲಾಮಂಜೂರ್ಮಾಡಬೇಕು.—ಒಪ್ಪಿದರೂ.

18. ಇದರಲ್ಲಿಡಬೇಕಾದ ಲಿಖ್ತುಗಳು.—ಮುಂದೆ ವಿಸರ್ಜಿಸಲ್ಪಡುವ ಷಿಡ್ಯೂಲ್‌ನಲ್ಲಿ ನಮೂದಾಗುವ ಲಿಖ್ತುಗಳು ಕ್ರಮವಾಗಿ ಈ ಸಂಘದಲ್ಲಿ ಇಡಲ್ಪಡತಕ್ಕದ್ದು. ಪ್ರತಿ ಟರಂಗೂ ಗವರ್ನಮೆಂಟಿನಿಂದ ಮೊಕರೂರ್ ಆಗಬಹುದಾದ ಆಡಿಟರುಗಳಿಂದ ಈ ಲಿಖ್ತುಗಳು ಚಕಾಸುಮಾಡಲ್ಪಡತಕ್ಕದ್ದಾಗಿವೆ.—ಒಪ್ಪಿದರು.

19. ಬ್ಯಾಂಕಿನ ಕಿಲ್ತು.—ಟೈಟಲ್ ಡೀಡುಗಳು ಮುಂತಾದ ದಸ್ತಾವೇಜುಗಳು ಬ್ಯಾಂಕ್ ಹೌಸಿನಲ್ಲಿಯೇ ಇರತಕ್ಕದ್ದು. ಸರ್ಕಾರದಿಂದ ಅಧಿಕಾರ ಹೊಂದಿದ ಆಫೀಸರುಗಳು ಮತ್ತು ಬ್ಯಾಂಕಿನ ಮೆಂಬರುಗಳು ಈ ಲಿಖ್ತುಗಳನ್ನೂ ಮತ್ತು ಟೈಟಲ್ ಡೀಡ್ ಮುಂತಾದ ದಸ್ತಾವೇಜುಗಳನ್ನೂ ಕ್ಯಾಷ್ ಹಾಜರಿಯನ್ನ ಸಹಾ ಇನಸ್ಪೆಕ್ಷನ್ ಮಾಡಬಹುದು.—ಒಪ್ಪಿದರು.

20. ಬಡ್ಡಿಯ ವಿಲೇವಾರಿ.—ಸರ್ಕಾರದಿಂದಲೂ ಇತರರಿಂದಲೂ ಬ್ಯಾಂಕು ನಾಜಕೂರಿಗೆ ಬಂದಿರುವ ಮೊಬಲಗಿಗೆ ಟರಂಪ್ರಕಾರ ಆಗಲಿ ಯಾ ಡಿಪಾಜಿಟೆದಾರರಲ್ಲಿ ಒಪ್ಪಿಕೊಂಡಿರುವ ವಾಯಿದೆಯಲ್ಲಿ ಆಗಲಿ ಬಡ್ಡಿಯನ್ನ ಪಾವತಿ ಮಾಡಬೇಕು.—ಒಪ್ಪಿದರು.

21. ಸಿಬ್ಬಂದಿಗಾಗಿ ವಿಧಿಸಿರುವ ಖರ್ಚನ್ನ ಆಯಾ ಮಾಹೆ ಆಬೈರಿನಲ್ಲಿ ಮಾಡಿಕೊಳ್ಳತಕ್ಕದ್ದು.—ಒಪ್ಪಿದರು.

22. ಸಾಲಾಪಡೆದ ಮೆಂಬರು ಪಾವತಿ ಬಗ್ಯೆ ಮಾಡಿಕೊಂಡ ವಾಯಿದೆಗೆ ಪೂರ್ವದೇ ಮೊಬಲಗು ವಾಪಸುಮಾಡಿದ ಪಕ್ಷದಲ್ಲಿ ಬಾಕಿ ಪುಳಿಯುವ ರೋಜುಗಳಿಗೆ ಬಡ್ಡಿಯನ್ನ ವಸೂಲ್ಮಾಡಬೇಕಾವ ಅವಶ್ಯವಿಲ್ಲ.—ಒಪ್ಪಿದರು.

23. ಬ್ಯಾಂಕಿನಲ್ಲಿ ಹಾಜರಿರಬೇಕಾದ ಮೊಬಲಗು.—ಗೊತ್ತಾದ ಹಾಜರಿರಬೇಕಾದ ಮೊಬಲಗಿಗಿಂತ ಜಾಸ್ತಿಯಾಗಿ ಉಳಿಯುವ ಎಲ್ಲಾ ಮೊಬಲಗನ್ನು ಸರ್ಕಾರಕ್ಕೆ ವಾಪಸು ಜಮಾ ಕೊಡತಕ್ಕದ್ದು.—ಒಪ್ಪಿದರು.

24. ಸಾಲಾತೆಗೆಯುವ ಉದ್ದೇಶ.—ಸಾಲಾಕೊಡುವದಕ್ಕೆ ಮುಂಚೆ ಯಾವ ಉದ್ದೇಶಕ್ಕಾಗಿ ಅದು ತೆಗೆಯಲ್ಪಡುತ್ತೊ ಅದನ್ನ ವಿಚಾರಿಸಿಕೊಳ್ಳಬೇಕಲ್ಲದೆ ಸದರೀ ಉದ್ದೇಶಕ್ಕೆ ಈ ಜಣವು ವಿನಿಯೋಗಿಸಲ್ಪಡದೆ ಇದ್ದರೆ ಬಂದು ತಿಂಗಳ ನೋಟೀಸಿನಿಂದ ಆ ಸಾಲವು ವಸೂಲ್ಮಾಡಿಕೊಳ್ಳುವಂತಿರತಕ್ಕದ್ದು.—ಒಪ್ಪಿದರು.

25. ಈ ಉದ್ದೇಶವು ಯಂಥಾದಂದರೆ.—ಗೊಬ್ಬರಾ, ಬಿಜಾ, ದನಕರಗಳು ಮತ್ತು ಜಿಥಾಯಿತು ಬಗ್ಯೆ ಬೇಕಾದ ಇತರ ಅಜಬಾಬು ಯಾನೆ ಸಲಕರಣಿಗಳನ್ನು ಕೊಂಡು ಕೊಳ್ಳುವದಕ್ಕೂ ಸಾಗುವಳಿ ಬಗ್ಯೆ ಬೇಕಾದ ಕೂಲಿ ಮತ್ತು ಇತರ ಲಾಗವಡು ಕಂದಾಯ ಪಾವತಿ ಸಾಗುವಳಿ ಅಯಾಂಕಾಲದಲ್ಲಿ ಸಾಗುವಳಿ ದಾರನ ಜೀವನಕ್ಕಾಗಿಯೂ ಆಧಾರ ಯಾ ಭೋಗ್ಯಸ್ವತ್ತನ್ನ ಬಿಡಿಸಿಕೊಳ್ಳುವದು ಇದೇ ಮೊದಲಾದ ಕಾರ್ಯಗಳಿಗೆ ಮಾತ್ರ ಉಪಯೋಗಿಸತಕ್ಕದ್ದಾಗಿದೆ. ವಾಯಿದೇ ಒಳಗೆ ಸದರೀ ಸಾಲಾತೀರಿಸುವದಕ್ಕೆ ಸರಿಯಾದ ರಹಾ ತೋರಿದವಿನಾ ಸಾಲಾ ಕೊಡತಕ್ಕದ್ದಲ್ಲಾ.—ಒಪ್ಪಿದರು.

26. ಷರತ್ತಿಗೆ ತಪ್ಪಿನಡೆದವನಿಗೆ ದಂಡನೆ.—ಎಲ್ಲಾ ಲೇವಾದೇವಿಗಳಲ್ಲಿಯೂ ಷರತ್ತಿಗೆ ವಿರೋಧವಾಗಿ ನಡೆದ ಸಂದರ್ಭದಲ್ಲಿ ಲೇಹೇದಾರನು ಪುನಹಾ ಸಾಲಾಪಡೆಯಲು ಅರ್ಹನಲ್ಲವೆಂಬ ಅಂಕವನ್ನ ಖಂಡಿತ ಜಾರಿಯಲ್ಲಿರತಕ್ಕದ್ದು.—ಒಪ್ಪಿದರು.

27. ರಿಜರ್ವ್ ಫಂಡು.—ಈ ಸಂಘದ ಸಿಬ್ಬಂದಿ ಖರ್ಚು ಡಿಮಾಜಿಟ್ ಮೊಬಲಗಿನ ಬಡ್ಡಿ ವಜಾ ಜಾತಾ ಉಳಿಯುವ ವಿಸ್ಪಷ್ಟ ನಫಾ ಮೊಬಲಗೂ ರಿಜರ್ವ್ ಫಂಡಿಗೇನೆ ಡಾಖಲಾಗತಕ್ಕದ್ದು.—ಒಪ್ಪಿದರು.

28. ಈ ಫಂಡು ಲೇವಾದೇವಿಯಲ್ಲಿ ಅವಶಾತ್ ಸಂಭವಿಸುವ ನಷ್ಟದ ಭರ್ತಿಗಾಗಿ ಉಪಯೋಗಿಸತಕ್ಕದ್ದು. ಈ ಬ್ಯಾಂಕ್ ವೈಂಡಪ್ ಯಾನೆ ಪೂರಾ ವಜಾ ಆದರೆ ಈ ಮೊಬಲಗು ಸಂಘದವರಿಗೆ ಸಲ್ಲತಕ್ಕದ್ದಲ್ಲ. ಇದೇರೀತಿಯಾಗಿ ಜಾರಿಯಲ್ಲಿರುವ ಅಥವ ಮುಂದೆ ಸ್ಥಾಪಿಸಲ್ಪಡುವ ಸಂಘಕ್ಕೆ ಆಗಲಿ, ಇಲ್ಲವೆ ಬ್ಯಾಂಕ್ ಸರಹದ್ದಿನೊಳಗೆ ಇರುವ ಇತರ ಧರ್ಮ ಕೆಲಸಕ್ಕಾಗಲಿ ಸಂಘದವರು ಉಪಯೋಗಿಸತಕ್ಕದ್ದು.—ಒಪ್ಪಿದರು.

29. ಈ ಸಂಘದವರು ತಾವು ಮಾಡುವ ವೆಹನತ್ತಿಗಾಗಿ ಏನೊಂದು ವರಮಾನವನ್ನೂ ಅಪೇಕ್ಷಿಸಕೂಡದು. ಸಿಬ್ಬಂದಿ ಮುಂತಾದ ಖರ್ಚು ತಕ್ಕ ಮಟ್ಟಿಗೆ ಮಿತವಾಗಿರಬೇಕು.—ಒಪ್ಪಿದರು.

30. ಮಿಟಿಂಗ್ ನಡಸತಕ್ಕ ಕಾಲ.—ಪ್ರತಿ ಆರುತಿಂಗಳಲ್ಲಿಯೂ ಬ್ಯಾಲನ್ಸ್ ಷೀಟ್ ತಯಾರ್ಮಾಡಿ ಜನರಲ್ ಮಿಟಿಂಗಿನಲ್ಲಿ ಮಂಜೂರ್ಮಾಡಿಸತಕ್ಕದ್ದು.—ಒಪ್ಪಿದರು.

31. ಪ್ರಪೋಜಿಷನ್ ನೋಟಿಸ್.—ಕೌನ್ಸಿಲ್ ಮೆಂಬರು ಯಾವದಾದರೂ ಬಂದು ಹೊಸ ಪ್ರಪೋಜಿಷನ್ ಮಾಡಬೇಕಾಗಿದ್ದರೆ ಮಿಟಿಂಗ್ ಸೇರುವದಕ್ಕೆ ಬಂದುವಾರ ಮುಂಚೆಯೇ ಎಲ್ಲಾ ಮೆಂಬರುಗಳಿಗೂ ನೋಟಿಸ್ ಕೊಡಬೇಕು.

(a) ಜನರಲ್ ಮಿಟಿಂಗಿನಲ್ಲಿ ಯಾವ ಮೆಂಬರಾದರೂ ಏನಾದರೂ ಪ್ರಪೋಜ್ ಮಾಡಬೇಕಾಗಿದ್ದಲ್ಲಿ ಮಿಟಿಂಗ್ ಆಗುವದಕ್ಕೆ 15 ದಿವಸ ಮುಂಚೆ ನೋಟಿಸ್ ಕೊಡಬೇಕು.— ಒಪ್ಪಿದರು.

32. ಮೆಂಬರುಗಳು ರಿಟೈರ್ ಆಗುವ ವಿಷಯ.—ಯಾವ ಮೆಂಬರಾದರೂ ಬ್ಯಾಂಕಿನಿಂದ ಬಿಡಗಡೆಯಾಗಲು ಇಷ್ಟವಿದ್ದಲ್ಲಿ ಡೈರೆಕ್ಟರಲ್ಲಿ ರಾಜಿನಾಮು ಹಾಜರ್ ಮಾಡಿ ಅದಕ್ಕೆ ಕೌನ್ಸಿಲರುಗಳ ಮಂಜೂರಾತಿ ಪಡಿಯಬೇಕು. ಆ ರಾಜಿನಾಮು ಅಂಗೀಕಾರವಾದಲ್ಲಿ ರಾಜಿನಾಮು ತಾರೀಖಿನಿಂದ ಮುಂದೆ ನಡೆಯುವ ಲೇವಾದೇವಿಗಳಿಗೆ ಬಿಟ್ಟು ಮೆಂಬರು ಜವಾಬ್ದಾರ ನಾಗಿರುವದಿಲ್ಲ. ಹಿಂದೆ ನಡೆದಿರುವ ಲೇವಾದೇವಿ ವಿಚಾರದಲ್ಲಿ ಎರಡು ವರುಷದ ವರಿಗೂ ಜವಾಬ್ದಾರನಾಗಿರತಕ್ಕದ್ದು. ಅಂಥಾ ರಾಜಿನಾಮೆ ಅಂಗೀಕರಿಸಲು ಕೌನ್ಸಿಲರುಗಳಿಗೆ ಇಷ್ಟವಿಲ್ಲದ ಪಕ್ಷಕ್ಕೆ ಬಂದು ಜನರಲ್ ಮಿಟಿಂಗ್ ಮಾಡಿ ಅಲ್ಲಿನ ರೆಜೊಲೂಷನ್ ಯಾನೆ ತೀರ್ಮಾನದಂತೆ ನಡಿಸತಕ್ಕದ್ದು. ಅಂಥಾ ಮೆಂಬರು ಸಂಘಬಿಡುವದರಲ್ಲಿ ಸಂಘದ ಒಟ್ಟು ಸಂಖ್ಯೆ ಪೈಕಿ ೪ ಹಿಸ್ಸೆ ಜನಗಳು ಒಪ್ಪದೆ ಇದ್ದಲ್ಲಿ ಸಂಘವನ್ನು ವೈಂಡಪ್ ಯಾನೆ ಮೌಖೂಫ್ ಮಾಡಬಹುದು.—ಒಪ್ಪಿದರು.

(1) ಈ ಬ್ಯಾಂಕ್ ಸಾಲಪಳ್ಳಿ ಗ್ರಾಮದ ಶ್ಯಾನಭೋಗ ಗೋಪಾಲಕೃಷ್ಣಯ್ಯನವರ 72ನೇ ನಂಬರು ಮನೆಯಲ್ಲಿ ಸ್ಥಾಪಿಸತಕ್ಕದ್ದು.—ಒಪ್ಪಿದರು.

(2) ಶಾನಭೂಗ ವೆಂಕಟಕೃಷ್ಣಪ್ಪನವರು, ಸಾಹುಕಾರ್ ಪಾಪಣ್ಣ, ಚಿಕ್ಕವಾಯಿ ಗೌಡ, ಪಟೇಲ್ ಸಿದ್ದೇಗೌಡ, ಪಟೇಲ್ ನಾರಣಪ್ಪ ಇವರುಗಳು ಡೈರೆಕ್ಟರ್‌ಗಳಾಗಿರತಕ್ಕದ್ದು.—ಒಪ್ಪಿದರು.

(3) ಅರಸಿನಕೆರೆ ಚಿಕ್ಕೇಗೌಡ, ಮರಿದೇವರು ಉರುಫ್ ತಿಮ್ಮಣ್ಣ, ಗೋಪಾಲ ಕೃಷ್ಣಯ್ಯ, ಗೌಡೈನಮಗಸಿದ್ದೈಯ, ಕಪ್ಪೈಯನ ನಂಜಣ್ಣ, ಕರಿಮಂಟೆ ರಂಗೈಯ ಇವರುಗಳು ಕೌನ್ಸಿಲರ್‌ಗಳಾಗಿರತಕ್ಕದ್ದು.—ಒಪ್ಪಿದರು.

(4) ಈ ಬ್ಯಾಂಕಿಗೆ ಸಂಬಂಧಪಟ್ಟ ಆಡಳಿತನಡಿಸತಕ್ಕ ಮತ್ತು ಕ್ಯಾಷ್ ಲೆಕ್ಕಪತ್ರಗಳು ಇಟ್ಟುಕೊಳ್ಳತಕ್ಕ ಬಗ್ಗೆ ಮತ್ತು ಡೈರೆಕ್ಟರ್‌ಗಳ ಪ್ರೊಸಿಡಿಂಗ್ಸ್‌ನುಸಾರ ಕೆಲಸ ನಡಿಸತಕ್ಕ ಬಗ್ಗೆ ಸಹ ಶಾನಭೂಗ ವೆಂಕಟಕೃಷ್ಣಪ್ಪನವರು ಟ್ರೆಜರರಾಗಿರತಕ್ಕದ್ದು.—ಒಪ್ಪಿದರು.

(5) ಈ ಸಭೆಗೆ ಪ್ರಕೃತ ಸೇರಿರುವ ಎಲ್ಲಾ ಮೆಂಬರುಗಳೂ ಒಟ್ಟಿಗೆ ಸೇರಿ ಮೀಟಿಂಗ್ ಮಾಡಿರುವದ್ದರಿಂದ ಈ ಫರಂ ಮೀಟಿಂಗುಮಾಡುವದು ಅನಾವಶ್ಯಕ ವಾಗಿರುವ ಪ್ರಯುಕ್ತ ಇದೇ ಆಖೈರು ಮೀಟಿಂಗಾಗಿಯೂ ಈಗ ಮಾಡಿರುವ ಪತ್ರಿಕೆಯೆ ಸಮಾಖ್ಯಪತ್ರ ಮತ್ತು ರೂಲ್ಸ್ ಆಗಿಯೂ ತಿರ್ಮಾನಿಸಿದೆ.

ಸಾಹುಕಾರ್ ಪಾಪಣ್ಣ, ಚೇರಮೆನ್.

ಮೆಂಬರುಗಳು.

1 ವೆಂಕಟಕೃಷ್ಣಪ್ಪ, ಶ್ಯಾ॥
2 ನಾರಣಪ್ಪ ಪಟೇಲ್
3 ಕರಿಮೆಂಟ ಪಟೇಲ್ ಸಿದ್ದೇಗೌಡನ ರುಜು
4 ಸಾಹುಕಾರ್ ಪಾಪಣ್ಣ
5 ನಂಜಣ್ಣನರುಜು
6 ಈಲ್ ವೀರೇಗೌಡನ ರುಜು
7 ಹ॥ ದ॥ ಮರಿಗೌಡನ ರುಜು
8 ಶ್ರೀ. ಈ. ಶ್ರೀಕಾರದ ಗುರ್ತಿನರುಜು. ಮರಿದ್ಯಾವರು ವುರಫ್ ತಿಮ್ಮಣ್ಣನ ರುಜು
9 ಕ॥ ಸಿದ್ದೇಗೌಡನ ರುಜು
10 ರಂಗೈಯನ ರುಜು
11 ಕೆಂಪೇಗೌಡನ ರುಜು
12 ತಿಮ್ಮಪ್ಪನ ಮರಿಗೌಡನ ರುಜು
13 ಈ ಗುರ್ತಿನ ರುಜು ಅರಗಿನ ಚಿಕ್ಕೆಗೌಡ ಹಾಕಿದಕ್ಕೆ ಕರಿಮೆಂಟ ಪಟೇಲ್ ಸಿದ್ದೇಗೌಡನ ಬರಹ
14 ಚಿಕ್ಕವಾಯಿ ಗೌಡನ ರುಜು.
15 ಶ್ರೀ. ಈ ಶ್ರೀಕಾರದ ಗುರುತು ಹುಚ್ಚೇಗೌಡ ಹಾಕಿದ್ದಕ್ಕೆ ಚಿಕ್ಕವಾಯಿ ಗೌಡನ ಬರಹ
16 ಗೋಪಾಲ ಕೃಷ್ಣಯ್ಯ, ಶಾ॥

ಹುಕುಂ ನಂ. 39—D. H. O.

1894ನೇ ಇಸವಿ ನವಂಬರ್ 30, ಬೆಂಗಳೂರು.

ಅಸೋಸಿಯೇಷನ್ ಮೆಮೋರಾಂಡಂ ಮತ್ತು ರೂಲ್ಸ್, ರೆಜಿಸ್ಟ್ರೇಷನ್ ಬಗ್ಗೆ, ಜಾಯಿಂಟ್ ಸ್ಟಾಕ್ ಕಂಪನಿಗಳ ರೆಜಿಸ್ಟ್ರಾರಿಗೆ ಕಳುಹಿಸಲ್ಪಡುವವು.

2. ಬ್ಯಾಂಕಿನಿಂದ, ಅಥವ ಬ್ಯಾಂಕಿಗೆ, ಬರದು ಕೊಡಲ್ಪಡುವ ದಸ್ತಾವೇಜುಗಳಿಗೆ ಕೊಡಬೇಕಾದ ಸ್ಟ್ಯಾಂಪು ಹಾಸಲನ್ನೂ ರೆಜಿಸ್ಟ್ರೇಷನ್ ರುಸುಮನ್ನೂ, ಅರ್ಜಿಡಿಕ್ಲಿನಲ್ಲಿ ತೋರಿಸಿರುವ ಮೇರಿಗೆ, ಗವರ್ನಮೆಂಟಿನವರು ದಯವಿಟ್ಟು ಕಡಮೆ ಮಾಡಿರುತ್ತಾರೆ.

3. ಶ್ರೀರಂಗಪಟ್ಟಣದ ಖಜಾನೆಯಲ್ಲಿ 16,000 ರೂಪಾಯಿಗಳನ್ನಿಡುವದಕ್ಕೂ, ಬ್ಯಾಂಕಿನ ಮೆಂಬರುಗಳಿಗೆ ಸಾಲ ಕೊಡುವದಕ್ಕಾಗಿ ಬೇಕಾಗುವ ಹಣಗಳನ್ನು, ಮೇಲ್ಕಂಡ ಮೊಬಲಗಿನ ವರಿಗೆ ಬ್ಯಾಂಕಿಗೆ ಸಾಲ ಕೊಡುವದಕ್ಕೂ ಡೆಪ್ಯುಟಿ ಕಮ್ಮಿಷನರಿಗೆ ಅಧಿಕಾರ ಕೊಡಲ್ಪಟ್ಟಿದೆ. ಬ್ಯಾಂಕಿಗೆ ವಾಸ್ತವವಾಗಿ ಸಾಲಕೊಟ್ಟಿರುವ ಮೊಬಲಗಿಗೆ, ವರ್ಷಕ್ಕೆ ಶೇಕಡ 4ರಂತೆ, ಆರು ತಿಂಗಳಿಗೆ ಒಂದಾವರ್ತಿ, ಪ್ರತಿವರ್ಷದ ಡಿಸೆಂಬರ್ 31 ಮತ್ತು ಜೂ 30ನೇ ತಾರೀಖುಗಳ ವರಿಗೆ ಆಗುವ ಬಡ್ಡಿಯನ್ನು ಬ್ಯಾಂಕಿನಿಂದ ವಸೂಲ್ ಮಾಡಬೇಕು.

4. ಬ್ಯಾಂಕಿನ ಲೆಕ್ಕಗಳನ್ನು ಜಾಗರೂಕತೆಯಿಂದ ಸರಿನೋಡುವದಕ್ಕೂ, ಪ್ರತಿ ಆರು ತಿಂಗಳಿಗೂ ತಪ್ಪಲ್ಲದ ಬಾಕೀ ಪಟ್ಟಿಯನ್ನು ತಯಾರು ಮಾಡುವದಕ್ಕೂ ಕಂಟ್ರೋಲರು ಏರ್ಪಾಡು ಮಾಡಬೇಕು.

5. ಪಾಲಹಳ್ಳಿ ರೈತರು ವ್ಯವಸಾಯದ ಬ್ಯಾಂಕುಗಳ ಏರ್ಪಾಡಿನ ಗುಣಗ್ರಹಣ ಮಾಡಿದ್ದನ್ನೂ, ಅವರು ತಮ್ಮ ಗ್ರಾಮದಲ್ಲಿ ಒಂದು ಬ್ಯಾಂಕನ್ನಿಡುವದಕ್ಕೋಸ್ಕರ ಉತ್ಸಾಹದಿಂದ ಶೀಘ್ರವಾಗಿ ಕೇರಿದ್ದನ್ನೂ ನೋಡಿ ಗವರ್ನಮೆಂಟಿನವರು ಸಂತೋಷ ಪಡುತ್ತಾರೆ; ಮತ್ತು ಈ ದೇಶದ ಇತರೆ ಭಾಗಗಳಲ್ಲಿ ಬುದ್ಧಿವಂತರಾಗಿಯೂ ಗೌರವಸ್ಥರಾಗಿಯೂ ಇರುವ ರೈತರು, ಸ್ವಲ್ಪಕಾಲದಲ್ಲಿಯೇ ಇವರ ಮಾರ್ಗವನ್ನನುಸರಿಸಿ, ಇಂಥಾ ಬ್ಯಾಂಕುಗಳಿಂದುಂಟಾಗುವ ಪ್ರಯೋಜನವನ್ನು ಪಡೆಯುವರೆಂದು ಅವರು ಕೋರುತ್ತಾರೆ.

ಟಿ. ಆನಂದರಾವ್,
ಚೀಫ್ ಸೆಕ್ರೆಟರಿ.

1894ನೇ ಇಸವಿ ನವಂಬರ್ 30ನೇ ಮಾರ್ಕ್ಯಂ ನಂ. 39—D. H. O. ನೇ ಗವರ್ಣಮೆಂಟ್ ಫ್ರೊಸೀಡಿಂಗ್ಸಿನ ಅಪೆಂಡಿಕ್ಸ್.

1879ನೇ ಇಸವಿ Iನೇ ಆಕ್ಟಿನ ಪ್ರಕಾರ ಸ್ಟ್ಯಾಂಪು ಹಾಸಲ್.

(1) ಕೆಳಿದ ಕೂಡಲೆ ಯಲ್ಲದೆ ಅನ್ಯಥಾ ಪಾವತಿಯಾಗತಕ್ಕದ್ದಾಗಿ ಇರತಕ್ಕ ಬಿಲ್ ಆಫ್ ಎಕ್ಸ್‌ಛೇಂಜ್ ಯಾ ಪ್ರಾಮಿಸರಿನೋಟ್. ಜನರಲ್ ಸ್ಟ್ಯಾಂಪ್ ಆಕ್ಟಿನ 11ನೇ ಆರ್ಟಿಕಲ್, *b* ಕ್ಲಾಜು,

(*a*) 100 ರೂಪಾಯಿಗೆ ಮೀರದಿದ್ದರೆ. .. .. 1 ಆಣೆ.

(*b*) 100 ರೂಪಾಯಿಗೆ ಮೀರಿ, 1,000 ರೂಪಾಯಿಗೆ ಮೀರದೆ ಇದ್ದರೆ. 2 ಆಣೆ.

(2) (*a*) ಪತ್ರ (ಆರ್ಟಿಕಲ್ 14)

(*b*) ಇಂಡೆಮ್ನಿಟಿ ಪತ್ರ ಅಂದರೆ ಹೊಣೆ ಪತ್ರ (ಆರ್ಟಿಕಲ್ 28)

(*c*) ಅಡಮಾನ ಪತ್ರ (ಆರ್ಟಿಕಲ್ 14)

(*d*) ಅಡಮಾನವಿಟ್ಟ ಸೊತ್ತಿನ ಮೇಲೆ ಹೆಚ್ಚು ಖರ್ಚು ಬೀಳಿಸುವ ದಸ್ತಾವೇಜು (ಆರ್ಟಿಕಲ್ 30, *b* ಕ್ಲಾಜು.)

(*e*) ಪತ್ರ ಅಥವ ಅಡಮಾನ ಪತ್ರದ ಹವಾಲತೆ.

ಮೊಬಲಗು 100 ರೂಪಾಯಿಗೆ ಮೀರದಿದ್ದರೆ. ... .. 2 ಆಣೆ.

ಮೊಬಲಗು 100 ರೂಪಾಯಿಗೆ ಮೀರಿ, 1,000 ರೂಪಾಯಿಗೆ ಮೀರದಿದ್ದರೆ. .. 4 ಆಣೆ.

(3) ಬಂದು ಕಂಪೆನಿಯ ಮೆಮೋರಾಂಡಂ ಆಫ್ ಅಸೋಸಿಯೇಷ್ಯನ್, ಆರ್ಟಿಕಲ್ ಆಫ್ ಅಸೋಸಿಯೇಷ್ಯನ್ ಇರಲಿ, ಅಥವ ಇಲ್ಲದೆ ಇರಲಿ (ಆರ್ಟಿಕಲ್ 43.) } 5 ರೂಪಾಯಿ.

(4) ಆರ್ಟಿಕಲ್ಸ್ ಆಫ್ ಅಸೋಸಿಯೇಷ್ಯನ್ 8ನೇ ಆರ್ಟಿಕಲ್ (ಪ್ರತ್ಯೇಕವಾಗಿದ್ದರೆ.) 5 ರೂಪಾಯಿ.

(5) ಪವರ್ ಆಫ್ ಅಟಾರ್ನಿ (ಆರ್ಟಿಕಲ್ 50.) .. 4 ಆಣೆ.

(6) ವಡಂಬಡಿಕೆ (ಆರ್ಟಿಕಲ್ 5, *c* ಕ್ಲಾಜು.) .. ಡಿಟೋ

(7) ರಿಲೀಜ್‌ಯಾನೆ ಖುಲಾಸೆ (ಆರ್ಟಿಕಲ್ 54.) .. ಡಿಟೋ

1877ನೇ ಇಸವಿ IIIನೇ ಆಕ್ಟ್ ಪ್ರಕಾರ ರೆಜಿಸ್ಟ್ರೇಷ್ಯನ್ ರುಸುಂ.

(1) ಕಮ್ಮತು 100 ರೂಪಾಯಿಗೆ ಮೀರದೆ ಇದ್ದರೆ—ಷೆಡ್ಯೂಲ್ ಸಹಿತ .. 8 ಆಣೆ.

(2) 100 ರೂಪಾಯಿಗೆ ಮೀರಿ, 1,000 ರೂಪಾಯಿಗೆ ಮೀರದೆ ಇದ್ದರೆ .. 1 ರೂಪಾಯಿ.

(3) ಸರ್ಚ್‌ಯಾನೆ ಹುಡುಕುವದು .. .. .. ರುಸುಂ ಇಲ್ಲದೆ.

(4) ಸೈಕ್ ಮೊಹರಾದ ಕಾಪಿಗಳು .. .. .. 100 ಮಾತಿಗೆ 1 ಆಣೆ.

(5) ಪವರ್ ಆಫ್ ಅಟಾರ್ನಿಯನ್ನ ದೃಢಪಡಿಸುವದು .. .. 4 ಆಣೆ.

(6) ರೆಜಿಸ್ಟರ್ ಮಾಡುವ ಆಫಿಸರುಗಳು ಮನೆಗೆ ರೆಜಿಸ್ಟರ್ ಮಾಡುವದಕ್ಕಾಗಿ ಬರುವದಕ್ಕೆ 2 ರೂಪಾಯಿ.

(7) ಕಮ್ಮಿಷ್ಯನ್ ಕೊಡುವದು .. .. 2 ರೂಪಾಯಿ.

(8) ರೆಜಿಸ್ಟರ್ ಮಾಡುವ ಆಫಿಸರಿಗೆ ಅಥವ ಇತರರಿಗೆ ಮೈಲೇಜ್ ಮೈಲಿ 1ಕ್ಕೆ 2 ಆಣೆ.

1866ನೇ ಇಸವಿ Xನೇ ಆಕ್ಟಿನ ಪ್ರಕಾರ ರುಸುಂ.

(1) ಮೆಂಬರುಗಳ ಸಂಖ್ಯೆ ಎಷ್ಟಿದ್ದಾಗ್ಯೂ, ವ್ಯವಸಾಯದ ಬ್ಯಾಂಕಿಂಗ್ ಕಂಪೆನಿ ರೆಜಿಸ್ಟ್ರೇಷ್ಯರ ಬಗ್ಯೆ 1 ರೂಪಾಯಿ.

(2) ಮೆಂಬರುಗಳ ಸಂಖ್ಯೆಯು ಹೆಚ್ಚಿದ್ದಕ್ಕೆ ರೆಜಿಸ್ಟ್ರೇಷ್ಯ ರುಸುಂ .. 1 ರೂಪಾಯಿ.

(3) ಯಾವದಾದರೂ ದಸ್ತಾವೇಜು ವಗೈರೆಯನ್ನ ರೆಜಿಸ್ಟರ್ ಮಾಡತಕ್ಕ ಬಗ್ಯೆ .. 8 ಆಣೆ.

(4) ಯಾವದಾದರೂ ಬಂದು ವಿಷಯವನ್ನು ರೆಕಾರ್ಡು ಮಾಡುವದಕ್ಕೆ .. 8 ಆಣೆ.

1894ನೇ ಇಸವಿ ಅಕ್ಟೋಬರು ತಾ|| 12ನೇ ಶುಕ್ರವಾರದಲ್ಲು ಮೈಸೂರಲ್ಲಿ ಕೇರಿದ ಪ್ರಜಾ ಪ್ರತಿನಿಧಿಗಳ ಸಭೆಯಲ್ಲಿ ನಡೆದ ಮೈಸೂರು ಸಂಸ್ಥಾನದ ದಿವಾನರವರ ಉಪನ್ಯಾಸದ ಯೆಕ್ಸಾಟ್ರಕ್ಟ್ (ಉತ್ತಾರು.)

ವ್ಯವಸಾಯದ ಬ್ಯಾಂಕುಗಳು.—ಈ ಉಪನ್ಯಾಸವನ್ನು ಮುಗಿಸುವದಕ್ಕೆ ಮುಂಚೆ, ಪ್ರಾರ್ವದಲ್ಲಿ ಅನೇಕಾವರ್ತಿ ನೀವು ಗೌರ್ನಮೆಂಟಿನವರ ಗಮನಕ್ಕೆ ತಂದಿರುವ ಅಂಶವಾದ್ಯವ್ಯವಸಾಯದ್ದೆ, ಬ್ಯಾಂಕುಗಳನ್ನು ಈ ಶೀಮೆಯಲ್ಲಿ ಸ್ಥಾಪಿಸುವ ವಿಷಯವನ್ನು ಕುರಿತು ಕೆಲವು ಅಂಶಗಳನ್ನು ತಿಳಿಸುತ್ತೇವೆ. ಕೇವಲ ಮುಖ್ಯವಾದ ಈ ವಿಷಯದಲ್ಲಿ ಅವಶ್ಯವಾವಷ್ಟು ವಿಚಾರವೂ ಪರಿಶೀಲನೆಯೂ ನಡೆದು ಮುಖ್ಯವಾಗಿ ಕೃಷಿಯಿಂದ ಜೀವಿಸುವ ರೈತರ ಪ್ರಯೋಜನಕ್ಕಾಗಿ ಈ ದೇಶದಲ್ಲಿ ವ್ಯವಸಾಯದ ಬ್ಯಾಂಕುಗಳನ್ನು ಸ್ಥಾಪಿಸುವದಕ್ಕೆ ಅನುಕೂಲವಾದ ಒಂದು ಏರ್ಪಾಡಿನ ಮಸೂದೆಯನ್ನು ತಯಾರ್ಮಾಡಿ ಈ ದಿನ ನಿಮಗೆ ಕೊಟ್ಟಿರುತ್ತೇವೆ. ಈ ಏರ್ಪಾಡಿನ ತಪಶೀಲುಗಳನ್ನು ವಿಸ್ತಾರವಾಗಿ ಮಸೂದೆಯಲ್ಲಿ ವಿವರಿಸಿರುತ್ತೆ. ಆದರೂ ಅದರ ಮುಖ್ಯಾಂಶಗಳನ್ನು ವ್ಯಕ್ತಪಡಿಸುವದಕ್ಕೋಸ್ಕರ ಇಲ್ಲಿ ಕೆಲವು ಸಂಗತಿಗಳನ್ನು ತಿಳಿಸುತ್ತೇವೆ. ಒಂದುಕಡೆ ನೋಡಲಾಗಿ, ಪ್ರಸಿಡೆನ್ಸಿ ಮತ್ತು ಇತರ ಎಕ್ಸ್‌ಛೇಂಜ್ ಬ್ಯಾಂಕುಗಳಲ್ಲಿ ಬಾಕೀ ನಿಂತಿರುವ ಹಣದಿಂದಲೂ, ಜನರ ಸ್ವಂತಹಣವನ್ನು ಬಡ್ಡಿ ಇಲ್ಲದೆ ಚಾಲತಿ ಡಿಪಾಜಿಟ್ಟನಂತೆ ಹೊರತು ಮತ್ಯಾವ ರೀತಿಯಲ್ಲಿಯೂ ಇಟ್ಟುಕೊಳ್ಳುವದಿಲ್ಲವೆಂದು ಪ್ರಸಿಡೆನ್ಸಿ ಬ್ಯಾಂಕಿನವರು ಹೇಳುವದರಿಂದಲೂ, ಶೇಕಡ 3½ ರೂಪಾಯಿ ಮೇರೆ ಬಡ್ಡಿ ಬರುವ ಗೌರ್ನಮೆಂಟ್ ಪತ್ರಗಳಿಗೆ ಅಧಿಕವಾದ ಬೆಲೆಯು ಹುಟ್ಟುತ್ತಿರುವದರಿಂದಲೂ, ಶೀಮೆಯಲ್ಲಿ ವ್ಯಾಪಾರಕ್ಕೆ ಉಪಯೋಗಿಸದೆ ಬಹಳಹಣವು ಸಂಗ್ರಹವಾಗಿದೆ ಎಂಬುದು ವ್ಯಕ್ತಪಡುತ್ತೆ. ಮತ್ತೊಂದುಕಡೆ ನೋಡಿದರೆ, ರೈತನು ದುಬಾರಿ ಬಡ್ಡಿ ತೆತ್ತಹೊರತು ಅವನ ವಾಸ್ತವವಾದ ಕೆಲಸಗಳಿಗೆ ಸಾಲವು ಹುಟ್ಟುವದು ಅಸಾಧ್ಯವಾಗಿರುತ್ತೆ. ನಮ್ಮ ಸಂಸ್ಥಾನದಲ್ಲಿಯೂ, ಗೌರ್ನಮೆಂಟ್ ಸೇವಿಂಗ್ಸ್ ಬ್ಯಾಂಕಿನಲ್ಲಿ ಹಾಜರಿರುವ ಡಿಪಾಜಿಟ್ ಮೊಬಲಗು 1881ನೇ ಇಸವಿಯಲ್ಲಿ 4 ಲಕ್ಷ ರೂಪಾಯಿ ಇದ್ದದ್ದು, ಈಚೆಗೆ ಬಡ್ಡೀ ದರವನ್ನು ತಗ್ಗಿಸಿ ಶೇಕಡ 3—9—1½ ಪೈ ನಂತೆ ಇಟ್ಟದ್ದಾಗ್ಯೂ ಕಳೆದ ವರುಷದಲ್ಲಿ 28 ಲಕ್ಷ ರೂಪಾಯಿಗಳ ವರಿಗೆ ವೃದ್ಧಿಯಾಗಿದೆ. ಹೀಗಿದ್ದರೂ ರೈತನಿಗೆ ಸುಲಭ ಬಡ್ಡಿಯಲ್ಲಿ ಸಾಲ ಸಿಕ್ಕುವ ಅನುಕೂಲತೆ ಬೇರೆ ಉಂಟಾಗಿಲ್ಲ. ಉಪಪತ್ತಿಯುಳ್ಳ ರೈತರು ಅಂದರೆ ಮುಖ್ಯವಾಗಿ ಕಾಫೀ ಪ್ಲಾಂಟರುಗಳು ಮತ್ತು ರಫ್ತಾಗತಕ್ಕ ಜಿನಸುಗಳನ್ನು ಬೆಳೆಯುವವರು, ತಾವು ಬೆಳೆಯುವ ಫಸಲಿನ ಆಧಾರದ ಮೇಲೆ ವರ್ಷಕ್ಕೆ ಶೇಕಡ 9—12 ರಂತೆ ಬಡ್ಡಿ ಕೊಟ್ಟು ಜಿನಸುಗಳನ್ನು ಕೊಂಡುಕೊಳ್ಳುವ ಅನ್ಯದೇಶದ ಸಾಹುಕಾರರಿಂದ ಸ್ವಲ್ಪಮಟ್ಟಿಗೆ ಸಾಲವನ್ನು ಹುಟ್ಟಿಸಿಕೊಳ್ಳಲು ಶಕ್ತರಾಗಿರುತ್ತಾರೆ; ಆದರೆ ಸಾಮಾನ್ಯವಾದ ರೈತನು ದುಬಾರಿಬಡ್ಡಿ ತೆತ್ತಹೊರತು ಸಾಲವನ್ನು ತೆಗೆಯಲು ಸಾಧ್ಯವಿಲ್ಲ. ಅದ್ದರಿಂದ ಉಪಪತ್ತಿ ಇಲ್ಲದ ರೈತನಿಗೆ ಬಂಡವಾಳವು ದೊರಿಯುವಂತೆ ಏರ್ಪಾಟು ಮಾಡತಕ್ಕದ್ದು ಮುಖ್ಯಸಂಗತಿಯಾಗಿದೆ. ಈ ಏರ್ಪಾಟು ಮುಂದೆ ಯಾವರೀತಿ ಪರಿಣಮಿಸುವದೋ ಎಂಬ ಸಂದೇಹವೇನೋ ಸರ್ವರದವರಿಗೆ ಇಲ್ಲದೆ ಇಲ್ಲ. ಆದರೆ ಈಗ ನಮ್ಮ ದೇಶಸ್ಥಿತಿಯಂತೆಯೇ ಇದ್ದ ಕೆಲವು ಯೂರೋಪಿಯರ್ಯ ದೇಶಗಳಲ್ಲಿ ಈ ವಿಷಯದಲ್ಲಿ ನಡೆದ ಏರ್ಪಾಡುಗಳ ಫಲಿತಾಂಶಗಳನ್ನು ನೋಡಿದ್ದರಲ್ಲಿ ಇಲ್ಲಿಯೂ ಅದೇರೀತಿಯಲ್ಲಿ ಈಗ ಮಾಡುವ ಏರ್ಪಾಡುಗಳು ಉತ್ತರೋತ್ತರ ಫಲಕಾರಿಯಾಗಬಹುದೆಂದು ನಂಬಿಕೆ ತೋರುತ್ತೆ. ಮೇಲೆ ಹೇಳಿದ ದೇಶಗಳಲ್ಲಿ ಜಮೀನ್ ಸಾಗುವಳಿಗೆ ಬಂಡವಾಳ ವದಗುವದಕ್ಕಾಗಿ, ಬಂಡವಾಳವನ್ನು ಹೊಂದಿರುವವರಿಗೂ, ಸಾಲವನ್ನು ಅಪೇಕ್ಷಿಸುವ ರೈತನಿಗೂ ಮಧ್ಯೆ ಲ್ಯಾಂಡ್ ಕ್ರೆಡಿಟ್ ಬ್ಯಾಂಕುಗಳಂತೆ ಪರಸ್ಪರ ಸಹಾಯ ಸಂಘವನ್ನು ಏರ್ಪಡಿಸುವದಕ್ಕೋಸ್ಕರ ಅನೇಕ ವಿಧವಾದ ಉಪಾಯಗಳನ್ನು ಅಜಮಾಯಿಷಿ ಮಾಡಿರುತ್ತಾರೆ. ಹೀಗೆ ಅಜಮಾಯಿಷಿ ಮಾಡಿದ್ದರಲ್ಲಿ, ಸಾಲವನ್ನು ತೆಗೆಯುವ ರೈತನ ಅನುಕೂಲತೆಯನ್ನು ಮೆಧ್ಯದಲ್ಲಿರುವ ಸಂಘದವರು ಎಷ್ಟರಮಟ್ಟಿಗೆ ತಮ್ಮ ಅನುಕೂಲತೆಯಂತೆಯೇ ಭಾವಿಸಿದರೋ ಅದಕ್ಕನುಗುಣವಾಗಿ ಫಲ ಉಂಟಾಗಿದೆ. ಆದರೆ ಯಾವ ಸ್ಥಳಗಳಲ್ಲಿ ರೈತರು ಒಬ್ಬರಿಗೊಬ್ಬರು ಸಹಾಯ ಮಾಡಬೇಕೆಂಬುವದೇ ಮುಖ್ಯಕಾರ್ಯವಾಗಿಟ್ಟುಕೊಂಡು, ತಾವುಗಳೇ ಒಂದು ಸಂಘವನ್ನು ಏರ್ಪಡಿಸಿಕೊಂಡು ಬಂಡವಾಳಕ್ಕೂ ತಮಗೂ ಮಧ್ಯದಲ್ಲಿದ್ದ ಸಂಘಕ್ಕೆ ಬದಲಿಯಾಗಿ ತಮ್ಮ ಸಮುದಾಯದ ನಾಣ್ಯದ ಬಲವನ್ನಿಟ್ಟುಕೊಂಡು ಮಧ್ಯಸ್ಥಗಾರರ ನಫೆಯನ್ನು ಹೋಗಲಾಡಿಸಿ ತಮ್ಮ ನಾಣ್ಯಕ್ಕನುಗುಣವಾದ ಪ್ರಯೋಜನವನ್ನು ಪಡೆದರೋ ಅಂಥಾ ಸ್ಥಳಗಳಲ್ಲಿ ನಡೆದಿರುವ ಏರ್ಪಾಡು ಅತ್ಯಂತ ಫಲಕಾರಿಯಾಗಿರುತ್ತೆಂದು ವ್ಯಕ್ತಪಟ್ಟಿದೆ.

ವ್ಯವಸಾಯದ ಬ್ಯಾಂಕುಗಳೆಂದು ಪೆಸರಿಟ್ಟು ಈ ತರಹೇದ ಸಂಘಗಳನ್ನು ನಮ್ಮ ಶೀಮೆಯಲ್ಲಿ ಸ್ಥಾಪಿಸುವದಕ್ಕೂ, ಅವುಗಳಿಂದ ಪ್ರಯೋಜನ ಉಂಟಾಗುವಂತೆ ನಡೆಸುವದಕ್ಕೂ, ಈ ದೇಶದ ಈಗಿನ ಸ್ಥಿತಿಯಲ್ಲಿ ಅಸಾಧ್ಯ,

ವಾವ ಯಾವ ಅಭ್ಯಂತರಗಳೂ ಇರುವದಿಲ್ಲ. ಹಾಗೆ ನೋಡಿದರೆ, ಮೈಸೂರು ಸಂಸ್ಥಾನದಲ್ಲಿ ಗುತ್ತಿಗೆ ಮತ್ತು ಫಸಲಿನ ಮೇಲೆ ಅಡ್ವಾನ್ಸ್ ಕೊಡುವ ಪದ್ಧತಿಗಳಿರುವ ಪ್ರಾಂತ್ಯಗಳಲ್ಲಿ ವ್ಯವಸಾಯದ ಬ್ಯಾಂಕುಗಳನ್ನು ಸ್ಥಾಪಿಸುವದಕ್ಕೆ ಅಧಿಕವಾದ ಅನುಕೂಲತೆಗಳಿವೆ. ಈ ಬ್ಯಾಂಕುಗಳ ಏರ್ಪಾಡಿಗೆ ಮೂಲಾಧಾರವಾದ ವಿಷಯಗಳು ಯಾವವೆಂದರೆ :—

i. ಈ ಸಂಘ ಅಥವ ಬ್ಯಾಂಕಿನಲ್ಲಿ ಪರಸ್ಪರ ಸಹಾಯವೇ ಆಧಾರವಾಗಿಟ್ಟುಕೊಂಡು, ತಮ್ಮತಮ್ಮಲ್ಲಿ ಪರಿಚಯ, ನಡತೆ, ಧಣೂತಿ, ಇವುಗಳ ತಿಳುವಳಿಕೆ ಇವುಗಳಿಂದ ಉಂಟಾಗುವ ಪರಸ್ಪರ ನಂಬಿಕೆಯ ಮೇಲೆ ಜಮ್ಮಾನು ಹಿಡುವಳಿದಾರರು ಸೇರಬೇಕು. ಸುಲಭ ಬಡ್ಡಿಗೆ ಸಾಲವನ್ನು ಕೊಡುವದರ ಮೂಲಕ ಸಂಘಕ್ಕೆ ಸೇರಿದ ಎಲ್ಲರಿಗೂ ಪ್ರಯೋಜನವನ್ನುಂಟುಮಾಡತಕ್ಕದ್ದೇ ಬ್ಯಾಂಕಿನ ಮುಖ್ಯೋದ್ದೇಶವಾಗಿರಬೇಕೇಪೊರ್ತು, ವಿಭಾಗಿಸಿಕೊಳ್ಳತಕ್ಕ ನಫೆಯನ್ನು ಸಂಪಾದಿಸಿಕೊಳ್ಳುವ ಇರಾದೆ ಇರಕೂಡದು.

ii. ಪೇರುಮೂಲಕ ಬಂಡವಾಳವನ್ನು ಸೇರಿಸಕೂಡದು. ಬ್ಯಾಂಕಿಗೆ ಬೇಕಾಗುವ ದ್ರವ್ಯವನ್ನು ಸಾಲದ ಮೂಲಕವಾಗಲೀ ಡಿಪಾಜಿಟ್ ಮೂಲಕವಾಗಲೀ ಕೂಡಿಸತಕ್ಕದ್ದು.

iii. ಮೆಂಬರುಗಳು ಹಣ ಕೊಡತಕ್ಕದ್ದಿಲ್ಲ; ಬಂದ ಹಣಕ್ಕೆ ಜವಾಬ್ದಾರಿ ಮಾತ್ರ ಆಗಿರತಕ್ಕದ್ದು. ಈ ಜವಾಬ್ದಾರಿಯನ್ನೆ ಕ್ಲಿಪ್ತಪಡಿಸಿಕೊಳ್ಳುವದಕ್ಕೆ ಒಬ್ಬೊಬ್ಬನಿಗೆ ಕೊಡತಕ್ಕ ಸಾಲದ ಮೊಬಲಗು ಇಷ್ಟಕ್ಕೆ ಮಿಾರಕೂಡದೆಂದೂ, ಅಥವ ಒಟ್ಟು ಸಾಲವು ಇಷ್ಟಮೊಬಲಗಿಗೆ ಮಿಾರಕೂಡದೆಂದೂ, ಏರ್ಪಾಟು ಮಾಡಿಕೊಳ್ಳುವದಕ್ಕೂ, ಅಥವ ಮುಂದಿನ ಜವಾಬ್ದಾರಿ ತಪ್ಪಿಸಿಕೊಳ್ಳುವದಕ್ಕೆ ಇಷ್ಟ ಬಂದಾಗ ಸಂಘವನ್ನು ಬಿಟ್ಟುಬಿಡುವದಕ್ಕೂ ಮೆಂಬರುಗಳು ಸ್ವತಂತ್ರರಾಗಿರತಕ್ಕದ್ದು.

iv. ಬ್ಯಾಂಕಿನ ಹಣವನ್ನು ಕ್ರಮೇಣ ಬಂದು ರಿಜರ್ವ್‌ಫಂಡು ಮಾಡುವದಕ್ಕೆ ಅನುಕೂಲಿಸುವಂತೆಯೂ, ಸಿಬ್ಬಂದಿ ಖರ್ಚು ಕಳೆಯುವಂತೆಯೂ, ಕಟ್ಟಬರುವಂತೆ ಮಿತವಾದ ಬಡ್ಡಿ ದರದಲ್ಲಿ ಮೆಂಬರುಗಳಿಗೆ ಮಾತ್ರ ಸಾಲ ಕೊಡತಕ್ಕದ್ದು.

v. ಮೆಂಬರುಗಳಿಂದಲೇ ಚುನಾಯಿಸಲ್ಪಟ್ಟು ಸಂಬಳವಿಲ್ಲದೆ ಕೆಲಸಮಾಡುವ ಒಂದು ಕಮ್ಮಿಟಿಯಿಂದ ಬ್ಯಾಂಕಿನ ಆಡಳಿತಗಳು ನಡೆಸಲ್ಪಡತಕ್ಕದ್ದು.

vi. ಸಾಧಾರಣವಾದ ಜಾಗರೂಕತೆಯಿಂದ ಸಾಲವನ್ನು ತೀರಿಸಿ ಸಾಲ ತೆಗೆದುಕೊಂಡ ರೈತನಿಗೆ ಸ್ವಲ್ಪ ನಫೆಯು ಉಳಿಯುವ ಯಾವದಾದರೂ ವ್ಯವಸಾಯದ ಕೆಲಸ, ಅಥವ ಕಮ್ಮಿಟಿಯವರು ಒಪ್ಪತಕ್ಕ ಇತರ ಕಾರ್ಯಕ್ಕಲ್ಲದೆ ಮತ್ಯಾವದಕ್ಕೂ ಸಾಲ ಕೊಡಕೂಡದು.

ಈ ಸಂಬಂಧವಾಗಿ ಇತರ ಸಾಧಾರಣ ವಿಷಯಗಳೂ ಆಚರಣೆಯಲ್ಲಿ ಬೇಕಾಗುವ ತಪಶೀಲುಗಳೂ, ನಿಮಿಗೆ ಕೊಟ್ಟಿರುವ ಕನ್ನಡ ಮುಸೂದೆಯಲ್ಲಿ ವಿಶದವಾಗಿ ವಿವರಿಸಲ್ಪಟ್ಟಿವೆ. ಈ ಮೇರೆ ಏರ್ಪಡಿಸಲ್ಪಟ್ಟು ಯಥಾರೀತಿಯಿಂದ ಲೇವಾದೇವೀ ನಡೆಸುವ ಬ್ಯಾಂಕು ಊರ್ಜಿತವಾಗಿ ನಡೆದು, ಉತ್ತರೋತ್ತರ ಹಣವಿರುವವರು ನಂಬಿಕೆಯಿಟ್ಟು ಧಾರಾಳವಾಗಿ ಬ್ಯಾಂಕಿನಲ್ಲಿ ತಮ್ಮ ಹಣವನ್ನು ಹಾಕ್ಯಾರೆಂಬುವದರಲ್ಲಿ ಸಂದೇಹವಿರುವದಿಲ್ಲ. ಆದರೆ ಈ ರೀತಿಯಾವ ನಂಬಿಕೆಯೂ ಜನಗಳಿಗೆ ಹುಟ್ಟುವದಕ್ಕೆ ಸ್ವಲ್ಪಕಾಲ ಬೇಕಾಗುವದರಿಂದ ಆದುವರಿಗೆ ಮಿತವಾದ ದರದ ಬಡ್ಡೀಗೆ ಸರಕಾರದವರು ಬ್ಯಾಂಕಿನಲ್ಲಿ ತಮ್ಮ ಹಣವನ್ನು ಡಿಪಾಜಿಟ್ ಇಟ್ಟು ಸಹಾಯಮಾಡಲು ಸಿದ್ಧರಾಗಿರುತ್ತಾರಲ್ಲದೆ ಸ್ಟ್ಯಾಂಪು ವಗ್ಗೈರೆ ಫೀಸಲನ್ನು ಮಾಫ್ ಮಾಡುವದಕ್ಕೂ, ಸಾಲದ ದಸ್ತಾವೇಜುಗಳನ್ನು ಸ್ಪೆಷಲ್ಲಾಗಿ ರಿಜಿಸ್ಟರ್ ಮಾಡುವಬಗ್ಯೂ ಮತ್ತು ಸಾಲಗಳನ್ನು ಜಾಗ್ರತೆಯಾಗಿ ವಸೂಲ್ ಮಾಡುವ ಬಗ್ಯೂ, ಹಣವನ್ನು ಸರ್ಕಾರಿ ಖಜಾನೆಗಳಲ್ಲಿ ಇಟ್ಟುಕೊಳ್ಳುವಬಗ್ಯೂ, ಲೆಕ್ಕಗಳನ್ನು ಕಾಲಕಾಲಕ್ಕೆ ತನಿಖೆ ಮಾಡುವ ವಗ್ಗೈರೆಬಗ್ಯೂ ತಕ್ಕ ಏರ್ಪಾಟು ಮಾಡುತ್ತೆ. ಆದರೆ ಪರಸ್ಪರ ಸಹಾಯದ ಬುದ್ಧಿಯು ಜಮ್ಮಾದಾರುಗಳಲ್ಲಿಯೇ ಹುಟ್ಟಬೇಕಾವುದು ಮತ್ತು ಅಂಥಾ ಭಾವವು ಇರುವವರಿಗೂ ಸಂಘವು ಊರ್ಜಿತವಾಗಿರುವದು. ಕೊನೇಪಕ್ಷ ಈ ಏರ್ಪಾಟನ್ನು ಪ್ರಾರಂಭಿಸುವಮಟ್ಟಿಗಾದರೂ ಸಂಸ್ಥಾನಾಮುಳಿ ಅನೇಕ ಕಡೆಗಳಲ್ಲಿ ಇಂಥಾ ಸಹಾಯ ಬುದ್ಧಿಯುಳ್ಳವರು ಇರುತ್ತಾರೆಂಬುವಕ್ಕೆ ಸಂದೇಹವಿಲ್ಲ. ಹೊಸದಾಗಿ ಮಾಡಲ್ಪಡುವ ಯಾವ ಏರ್ಪಾಟಾದರೂ ಅಲ್ಪಾರಂಭ ಮತ್ತು ಆದಿಶ್ರಮದಿಂದಲೇ ಪ್ರಬಲವಾಗಬೇಕಾದ ಪ್ರಯುಕ್ತ ಮೇಲೆ ವಿವರಿಸಿದ ಏರ್ಪಾಡು ಅನುಕೂಲವಾಗಿರುವ ಸ್ಥಳಗಳಲ್ಲಿ ಕೆಲವು ವರುಷಗಳವರಿಗೆ ಜಾಗರೂಕತೆಯಿಂದ ಆಚರಣೆಗೆ ತರಲ್ಪಟ್ಟರೆ ದೇಶದಲ್ಲೆಲ್ಲಾ ವ್ಯವಸಾಯದ ಬ್ಯಾಂಕುಗಳು ಸ್ಥಾಪನೆ ಆಗುವದಕ್ಕೆ ಕಾರಣವಾಗುತ್ತೆ. ಮತ್ತು ಜನರಿಗೆ ಮಿತವ್ಯಯ ಮತ್ತು ಪರಸ್ಪರ ಸಹಾಯ ಇವುಗಳು ಬೋಧೆಯಾಗುವದಕ್ಕೂ ಅವಕಾಶವಾಗುವದಲ್ಲದೆ ನಿಷ್ಪ್ರಯೋಜನವಾಗಿ ಮಿತಿಮಿಾರಿ ಖರ್ಚುಮಾಡತಕ್ಕದ್ದು ಶುದ್ಧ ಅಕ್ರಮವೆಂದು ಜನರಲ್ಲಿ ಪ್ರಬಲವಾದ ಅಭಿಪ್ರಾಯವು ಉತ್ಪತ್ತಿಯಾಗುವದಕ್ಕೂ ಕಾರಣವಾಗುತ್ತೆ.

ಅ ಪೆ ೯ ಡಿ ಕ್ಸ್.

ವ್ಯ ವ ಸಾ ಯ ದ ಬ್ಯಾ ಂ ಕು ಗ ಳು.

ಕೃಷಿಯಿಂದ ಜೀವಿಸುವ ಜನರು ಸುಖವಾಗಿರಬೇಕೆಂದು ಪೂರ್ವದಿಂದಲೂ ಅವರ ಹಿತಚಿಂತಕರ ಉದ್ದೇಶವಾಗಿದೆ. ಮಳೆಯು ಕಾಲಕಾಲಕ್ಕೆ ಆಗದೆ ಬೆಳೆ ಕೆಟ್ಟು ಕ್ಷಾಮ ಉಂಟಾದಾಗೆ ಪ್ರಜೆಗಳೆಲ್ಲರಿಗೂ ಕಷ್ಟಸಂಭವಿಸುವದರಿಂದ ರೈತರೂ ಆ ಕಷ್ಟಕ್ಕೆ ಭಾಗಿಗಳಾಗುವರು. ಆದರೆ ಸುಭಿಕ್ಷಕಾಲದಲ್ಲಿಯೂ ರೈತರಲ್ಲಿ ಅನೇಕರು ಕಷ್ಟಪಡುತ್ತಿರುವರು. 'ರಸ ಬೆಳೆದ ಕಸ ತಿನ್ನುವದು ತಮ್ಮ ಹಣೆಯಲ್ಲಿ ಬರದಿದೆ' ಎಂದು ಆಡಿಕೊಂಡು ಮನಸ್ಸಿಗೆ ಸಮಾಧಾನಮಾಡಿಕೊಳ್ಳುವರು. ತಾವು ಮಾಡಿದ ಬೆಳೆಯು ಬಹುಮಟ್ಟಿಗೆ ತಮ್ಮ ಕೈಸೇರದೆ ಇತರರ ಪಾಲಾಗುವದಕ್ಕೆ ಕಾರಣವೇನೆಂದು ವಿಚಾರ ಮಾಡುವವರು ಮಾತ್ರ ಅಪರೂಪ. ನಾವು ಮಾಡುವ ಕೆಲಸವು ನಮ್ಮ ಇಷ್ಟಾನುಸಾರ ಕೈಗೂಡದೆ ಹೋದರೆ ಆಗಲಿ, ಆಥವಾ ಕೈಗೂಡಿ ಅದರ ಫಲಾನುಭವ ಮಾತ್ರ ನಮಗೆ ಕಡಮೆ ಆದರೆ ಆಗಲಿ, ಹೀಗಾದ್ದು ಯಾತಕ್ಕೆಂದು ಯೋಚಿಸಬೇಕಾದ್ದು ನಮ್ಮ ಕರ್ತವ್ಯವಾಗಿದೆ. ಯಾವ ಕೆಲಸವೇ ಆಗಲಿ ನಮ್ಮ ಇಷ್ಟದಂತೆ ನೆರವೇರದ ಪಕ್ಷದಲ್ಲಿ ಅದು ನಮ್ಮ ಅಜಾಗರೂಕತೆ ಇಂದಲಾದರೂ ಆಗಿರಬಹುದು ಅಥವಾ ಕಾರಣಾಂತರಗಳಿಂದಲಾದರೂ ಆಗಿರಬಹುದು. ಹ್ಯಾಗಾದರೂ, ನಮ್ಮ ಇಷ್ಟವು ಮುಂದಕ್ಕಾದರೂ ನೆರವೇರುವಂತೆ ಸನ್ನಹಗಳನ್ನು ಮಾಡಬೇಕಾದ್ದು ಅವಶ್ಯಕ. ಹೀಗೆ ಮಾಡದೆ ನಮ್ಮ ದೇಶದ ರೈತರಲ್ಲಿ ಅನೇಕರು ಕಷ್ಟಪಡುತ್ತಿರುವರು ; ಬೆಳೆಯಲ್ಲಾ ಸಾವುಕಾರನ ಬಡ್ಡಿಗೆ ಕೊಟ್ಟು ಜೀವನಕ್ಕೆಲ್ಲವೆಂದು ಗೋಳಾಡುತ್ತಿರುವರು.

ಹೀಗೆ ಶ್ರಮಪಡುವದನ್ನು ವಿಚಾರಿಸಲಾಗಿ, ಸಾಗುವಳಿಗೆ ಬೇಕಾಗುವ ಹಣವು ರೈತನಿಗೆ ಸುಲಭ ಬಡ್ಡಿಗೆ ದೊರೆಯದೆ ಇರುವದೇ ಮುಖ್ಯಕಾರಣವೆಂದು ಹೇಳಬೇಕಾಗಿದೆ. ರೈತನು ಮೋಸಗಾರನಾವ್ದರಿಂದ ಸುಲಭ ಬಡ್ಡಿಗೆ ಸಾಲ ದೊರೆಯುವದಿಲ್ಲವೆಂದು ಹೇಳುವದಕ್ಕಾಗುವದಿಲ್ಲ. ಮೋಸಮಾಡಬೇಕೆಂಬುದು ಸಾಮಾನ್ಯವಾಗಿ ರೈತನಿಗೆ ಉದ್ದೇಶವಿರುವದಿಲ್ಲ. ಆದರೆ ತನ್ನ ವರದನ್ನು ತನ್ನ ನೆರೆಹೊರೆ ಜನರಿಗೆ ತಿಳಿಸಲು ಹಿಂತೆಗೆದು ಸಾವುಕಾರನ ಬಳಿಯಲ್ಲಿ ಬಹಳಪಡ್ಡಿ ಬಡ್ಡಿಯನ್ನು ತೆರುವದಕ್ಕೆ ಒಪ್ಪಿಕೊಂಡು ಸಾಲವನ್ನು ತೆಗೆದುಕೊಳ್ಳುತ್ತಾನೆ. ಇದರಿಂದ, ಆಗುವ ಬೆಳೆಯಲ್ಲಿ ಅಸಲನ್ನೂ ಬಡ್ಡಿಯನ್ನೂ ಪೂರ್ತಿಯಾಗಿ ತೀರಿಸಿ ತನ್ನ ಗೃಹಕೃತ್ಯವನ್ನು ನಡೆಸಿಕೊಳ್ಳುವದು ಅಸಾಧ್ಯವಾಗಿ, ಅನೇಕ ಸಂದರ್ಭಗಳಲ್ಲಿ ಬಡ್ಡಿಯನ್ನು ಕೂಡಾ ಪೂರ್ತಿಯಾಗಿ ತೀರಿಸುವದಕ್ಕಿಲ್ಲದೆ, ಅಸಲೂ ಬಡ್ಡಿಯೂ ವೃದ್ಧಿಯಾಗುತ್ತಲೇ ಇದ್ದು ಕೊನೆಗೆ ರೈತನ ಜಮೀನು ಅನ್ಯಾಕ್ರಾಂತವಾಗಿ ಅವನಿಗೆ ಜೀವನಕ್ಕೆ ಮಾರ್ಗವಿಲ್ಲದೆ ಅಲೆಯುವಂತಾಗುವದು. ಆದರೆ ರೈತರು ತಮ್ಮ ತಮ್ಮಲ್ಲಿ ಸಂಬಿಕೆ ಇಟ್ಟು ಒಬ್ಬನಿಗೆ ಅವಶ್ಯವಿದ್ದಾಗ ಮತ್ತೊಬ್ಬನು ಸುಲಭ ಬಡ್ಡಿಗೆ ಹಣವನ್ನು ಸಾಲ ಕೊಟ್ಟು ಸಹಾಯ ಮಾಡಿದ್ದೇ ಆದರೆ ಜಮೀನೇ ಅನ್ಯಾಕ್ರಾಂತವಾಗಬಹುದೆಂದು ಮೇಲೆ ಹೇಳಿದ ಅವಸ್ಥೆಯು ಪ್ರಾಯಶಃ ಉಂಟಾಗುವದಿಲ್ಲ. ರೈತನಿಗೆ ಸಾಲವು ಸುಲಭ ಬಡ್ಡಿಗೆ ದೊರತರೆ ಆಗ ಅವನು ತನ್ನ ಜಮೀನಿಗೆ ಹೆಚ್ಚಾಗಿ ಗೊಬ್ಬರ ಮುಂತಾವ್ದನ್ನು ಹಾಕಿ ವ್ಯವಸಾಯಮಾಡಿ ಅಧಿಕ ಬೆಳೆಯನ್ನು ತೆಗೆಯಬಹುದು; ಸುಗ್ಗಿಕಾಲದಲ್ಲಿಯೇ ದವಸವನ್ನು ಮಾರದೇ ತಡೆದು, ಕ್ರಯವು ಹೆಚ್ಚಾದಾಗ ಮಾರಿ ಸಾಲವನ್ನು ತೀರಿಸಿ ವಿಶೇಷವಾಗಿ ನಫೆಯನ್ನು ಹೊಂದಬಹುದು. ಮಸಲಾ, ಒಬ್ಬ ರೈತನು ಸಾವುಕಾರನಬಳಿ ಒಂದು ವರ್ಷವಾಯಿದೆ ಮಾಡಿಕೊಂಡು ತಿಂಗಳಿಗೆ ಶೇಕಡಾ 2 ರೂಪಾಯಿನಂತೆ ಬಡ್ಡಿ ಗೊತ್ತುಮಾಡಿಕೊಂಡು 200 ರೂಪಾಯಿಯನ್ನು ಸಾಲ ತೆಗೆದುಕೊಂಡು ಆ ಹಣವನ್ನು ವ್ಯವಸಾಯಕ್ಕೆ ಉಪಯೋಗಿಸಿ ಕಬ್ಬು ಬೆಳೆದು 200 ಮಣಬೆಲ್ಲವನ್ನು ಮಾಡುತ್ತಾನೆಂದು ಇಟ್ಟುಕೊಳ್ಳೋಣ. ಬೆಲ್ಲದಕ್ರಯವು ಸುಗ್ಗೀಕಾಲದಲ್ಲಿ ಮಣಕ್ಕೆ 1½ರೂ ಪಾಯಿನಂತೆಯೂ, ಇತರಕಾಲದಲ್ಲಿ 2 ರೂಪಾಯಿನಂತೆಯೂ ಇರುವದಾದರೇ ಸಾಹುಕಾರನು ಸುಗ್ಗೀಕಾಲದಲ್ಲಿಯೇ ತನ್ನ ಸಾಲವನ್ನು ತೀರಿಸಬೇಕೆಂದು ತಗಾದೆ ಮಾಡಿದ್ದೇ ಆದರೆ ರೈತನಿಗೆ ಉಳಿಯುವ ಹಣವು ಕತಮಿಯಾಗುವುದು. 200 ಮಣ ಬೆಲ್ಲವನ್ನು ಮಾರಿದರೆ, ಮಣಕ್ಕೆ 1½ ರೂಪಾಯಿನಂತೆ 300 ರೂಪಾಯಿ ಬರುವುದು; ಈ ಹಣದಲ್ಲಿ ಸಾಹುಕಾರನಿಗೆ ಕೊಡಬೇಕಾದ ಅಸಲು 200 ರೂಪಾಯಿ, ಬಡ್ಡಿ 48 ರೂಪಾಯಿ ಒಟ್ಟು 248 ರೂಪಾಯಿ ತೀರಿಸಿದರೆ ರೈತನಿಗೆ ಉಳಿಯುವುದು 52 ರೂಪಾಯಿ ಮಾತ್ರ. ಹೀಗಿಲ್ಲದೆ ವರ್ಷಕ್ಕೆ ಶೇಕಡ 6 ರಂತೆ ಬಡ್ಡಿಗೆ ಹಣವು ದೊರಕಿ, 18 ತಿಂಗಳುಗಳೊಳಗಾಗಿ ತನಗೆ ಅನುಕೂಲವಾದಾಗ ಹಣವನ್ನು ತೀರಿಸಬಹುದಾದರೆ, ರೈತನಿಗೆ ಹೆಚ್ಚಾಗಿ ಹಣವು ಉಳಿಯುವದು. ಮಣಕ್ಕೆ 2 ರೂಪಾಯಿನಂತೆ 200 ಮಣಕ್ಕೆ 400 ರೂಪಾಯಿ ಬರುವದು; ಇದರಲ್ಲಿ ಅಸಲು 200 ರೂಪಾಯಿ, ಬಡ್ಡಿ 18 ರೂಪಾಯಿ, ಒಟ್ಟು 218 ರೂಪಾಯಿಗಳು ಹೋದರೆ, 182 ರೂಪಾಯಿ ಉಳಿಯುತ್ತೆ. ಇದರಿಂದ ಸುಗ್ಗೀಕಾಲದಲ್ಲಿ ಮಾರಿ ಪಡೆಯುತ್ತಿದ್ದ ಪ್ರಯೋಜನಕ್ಕಿಂತ 130 ರೂಪಾಯಿ ಹೆಚ್ಚು ಪ್ರಯೋಜನ ಉಂಟಾಯಿತು.

ಹೀಗೆ ಸುಲಭ ಬಡ್ಡಿಗೆ ಸಾಲ ದೊರತರೆ ಅಧಿಕವಾದ ನಷ್ಟವಿಲ್ಲವೆಂಬುವದು ಸ್ಪಷ್ಟವಾಗಿದ್ದರೂ; ರೈತನಿಗೆ ಹಾಗೆ ಸಾಲವು ಯಾತಕ್ಕೆ ಸಿಕ್ಕುವದಿಲ್ಲವೆಂದು ಪ್ರಶ್ನೆ ಮಾಡಬೇಕಾಗಿದೆ. ರೈತನು ಉಪಪತ್ತಿ ಇರುವ ತನ್ನ ನೆರೆ ಹೊರೆಯವರಬಳಿ ಸಾಲ ಕೇಳುವದಕ್ಕೆ ಹಿಂತೆಗೆಯುತ್ತಾನೆಂದು ಮೊದಲೇ ಹೇಳಿದೆಯಷ್ಟೆ. ಆದರೆ ಇತರ ಕಾರಣಗಳೂ ಇವೆ ಎಂದು ಹೇಳಬೇಕಾಗಿದೆ. ಸಾಲ ಕೊಡುವದಕ್ಕೆ ಜನರಲ್ಲಿ ಹಣವೇ ಇಲ್ಲವೆಂದು ಹೇಳುವದಕ್ಕಾಗುವದಿಲ್ಲ. ಅನೇಕರು ತಮ್ಮ ಹಣವನ್ನು ಸೇವಿಂಗ್ಸ್ ಬ್ಯಾಂಕಿನಲ್ಲಿಟ್ಟು ಅಲ್ಲಿ ಸೇಕಡ 3½ ರಂತೆ ಬರುವ ಬಡ್ಡಿಯಿಂದಲೇ ತೃಪ್ತರಾಗಿರುತ್ತಾರೆ. ಹಣವಿರುವವರು ಹೀಗೆ ಮಾಡಲಿ, ಸಾಲ ಬೇಕಾಗಿರುವ ರೈತರಿಗೆ ತಮ್ಮಲ್ಲಿರುವ ಹಣವನ್ನು ಮಿತವಾದ ಬಡ್ಡಿಗೆ ಕೊಟ್ಟದ್ದೇ ಆದರೆ, ಸೇವಿಂಗ್ಸ್ ಬ್ಯಾಂಕು ಬಡ್ಡಿಗಿಂತ ತಮಗೂ ಅಧಿಕಪ್ರಯೋಜನವಾಗುವದು; ಇದಲ್ಲದೆ ಸಾಲ ತೆಗದುಕೊಂಡ ರೈತನಿಗೂ ಹೆಚ್ಚಾಗಿ ಹಣವುಳಿಯುವದು. ಮುಖ್ಯ, ಈ ಪ್ರಕಾರ ರೈತರು ತಮ್ಮತಮ್ಮಲ್ಲಿ ಲೇವಾದೇವಿ ಮಾಡದೇ ಇರುವದು ನೋಡಿದರೆ, ಅವರವರಲ್ಲಿ ನಂಬಿಕೆ ಕಡಮೆಯೆಂದು ಊಹಿಸಬೇಕಾಗಿದೆ. ಹೀಗೆ ನಂಬಿಕೆ ಕಡಮೆಯಾಗಿರುವದಕ್ಕೆ ಸಕಾರಣವಿರುವಂತೆ ತೋರುವದಿಲ್ಲ. ಇತರ ಪ್ರಾಂತ್ಯಗಳಿಂದ ಬರುವ ಮಾರವಾಡಿ, ಲಬ್ಬೆ ಮುಂತಾದ ಸಾಹುಕಾರರು ಇಲ್ಲಿನ ರೈತರಲ್ಲಿ ಅಪನಂಬಿಕೆಯನ್ನು ಬಿಟ್ಟು ಧೈರ್ಯವಾಗಿ ಫಸಲಿನ ಆಧಾರದಮೇಲೆ ಅವರಿಗೆ ಮುಂಗಡ ಕೊಟ್ಟು ಅದನ್ನು ಬರಮಾಡಿಕೊಳ್ಳುತ್ತಾರೆ; ರೈತರು ಅವರಿಗೆ ಮೋಸಮಾಡಬೇಕೆಂದು ಯತ್ನಿಸುವದಿಲ್ಲ. ಹೀಗಿರುವಾಗ ಉಪಪನ್ನರಾದವರು ಹಣಬೇಕಾದ ರೈತರಿಗೆ ಸಾಲವನ್ನು ಕೊಟ್ಟು ಸಹಾಯ ಮಾಡಿದರೆ ಮುಂದೆ ತಮ್ಮ ಬೆಳೆ ಕೆಟ್ಟಾಗಲಾಗಿಲಿ, ಇನ್ನಾವ ಕಾರಣದಿಂದಲಾದರೂ ಆಗಲಿ, ತಮಗೆ ಅವಶ್ಯಕ ಬಿದ್ದಾಗ ತಾವೂ ಸುಲಭ ಬಡ್ಡಿಗೆ ಹಣವನ್ನು ಪಡೆಯುವದಕ್ಕೆ ಅನುಕೂವಾಗುತ್ತೆ. ಹೀಗೆ ಮಾಡದೆ, ಸಾಹುಕಾರನ ಹತ್ತರ ಹೆಚ್ಚು ಬಡ್ಡಿ ತೆತ್ತು ಸಾಲಮಾಡಿಕೊಂಡು ಕೊನೆಗೆ ದರಿದ್ರನಾಗುವಂತೆ ಸಾಲಬೇಕಾದ ರೈತನನ್ನು ಬಿಟ್ಟುಬಿಟ್ಟರೆ ಮುಂದೆ ತಮಗೆ ಸಾಲಬೇಕಾದಾಗ ಸಾಹುಕಾರನಲ್ಲಿಯೇ ಹೋಗಬೇಕಾಗುವದರಿಂದ, ತಮಗೂ ಅದೇಗತಿ ಸಂಭವಿಸಬಹುದು. ಆದ್ದರಿಂದ ರೈತರಲ್ಲಿ ನಂಬಿಕೆಯಿಟ್ಟು ಸಹಾಯ ಮಾಡಿದರೆ ಅದರಿಂದ ಎಲ್ಲರಿಗೂ ಉಪಪತ್ತಿ ಹೆಚ್ಚಿ ಸುಖಜೀವನವೂ ಉಂಟಾಗುತ್ತೆಂದು ಹೇಳುವದಕ್ಕೆ ಸಂಶಯವಿಲ್ಲ.

ಹೀಗೆ ಉಪಪತ್ತಿ ಹೆಚ್ಚುವಿಕೆಯೂ, ಸುಖಜೀವನವೂ ಉಂಟಾಗುವುದೆಂದು ತಿಳಿದಮೇಲೆ, ರೈತರು ಯಾವ ವಿಧಗಳಲ್ಲಿ ಒಬ್ಬರಿಗೊಬ್ಬರು ಸಹಾಯಮಾಡಿದರೆ, ಅವುಗಳು ಸುಲಭವಾಗಿ ಸಾಧ್ಯವಾಗುತ್ತವೆಂದು ಆಲೋಚಿಸಬೇಕಾಗಿದೆ. ಮುಖ್ಯವಾಗಿ ಅನೇಕ ಕೆಲಸಗಳು ಒಟ್ಟುಗೂಡಿ ಮಾಡಿದರೆ ಕೈಗೂಡುವಷ್ಟು ಜನರು ತಾವುತಾವುಪ್ರತ್ಯೇಕವಾಗಿ ಮಾಡಿದರೆ ಕೈಗೂಡುವದಿಲ್ಲವೆಂಬ ವಿಷಯ ಸಕಲರಿಗೂ ತಿಳಿದಿದೆ. ದೇಶದಲ್ಲಿ ರೈಲನ್ನು ನಡಿಸತಕ್ಕ ಏರ್ಪಾಡುಗಳು ಒಬ್ಬೊಬ್ಬರಿಂದ ಮಾಡುವದಕ್ಕೆ ಅಸಾಧ್ಯವೆಂದು ಹೇಳಲು ಅವಶ್ಯಕವೇ ಇಲ್ಲ; ದ್ರವ್ಯ ಸಹಾಯವನ್ನು ಅಧಿಕವಾಗಿ ಪಡೆಯಲು ಶಕ್ತಿಯುಳ್ಳ ಗವರ್ನಮೆಂಟಿನವರಿಂದಾಗಲಿ, ಅನೇಕ ಜನರ ದ್ರವ್ಯವನ್ನು ಒಟ್ಟುಗೂಡಿಸಿರುವ ಕಂಪೆನಿ(ಸಮಾಜ)ಗಳಿಂದಾಗಲಿ ಸುಲಭವಾಗಿ ಏರ್ಪಡಿಸಲ್ಪಡುತ್ತವೆ. ಇದೇ ರೀತಿಯಲ್ಲಿ, ರೈತರು ಅನ್ಯೋನ್ಯ ಸಹಾಯವನ್ನು ಪಡೆದುಬೇಕಾದರೆ ಐಕಮತ್ಯದಿಂದಾಗುವಷ್ಟು ಇನ್ನಾವವಿಧದಿಂದಲೂ ಆಗುವದಿಲ್ಲ. ಈ ಐಕಮತ್ಯವು ವ್ಯವಸಾಯದ ಬ್ಯಾಂಕುಗಳಿಂದ ಉಂಟಾಗುವಷ್ಟು ಬೇರೆ ವಿಧಗಳಿಂದಾಗುವದಿಲ್ಲ. ರೈತರು ಒಟ್ಟುಗೂಡಿ ಅನ್ಯೋನ್ಯ ಸಹಾಯ ಸಮಾಜಗಳನ್ನು ಏರ್ಪಡಿಸಿಕೊಂಡು ಸಮಾಜಕ್ಕೆ ಸೇರಿದ ರೈತರುಗಳಿಗೆ ಸುಲಭವಾದ ವರದಲ್ಲಿ ಸಾಲವನ್ನು ಕೊಟ್ಟು ಸಾಗುವಳಿಗೆ ಸಹಾಯಮಾಡಿ, ಕುಯಿಲಾದ ಮೇಲೆ ಆಗಲಿ ಅಥವ ಅನುಕೂಲವಾದ ಕ್ರಯದೊರೆಯುವವರಿಗೂ ತಡೆದು ಹಾಗೆ ದೊರತಾಗ ಆಗಲಿ ಕೊಟ್ಟ ಹಣವನ್ನು, ಅದಕ್ಕಾಗುವ ಬಡ್ಡಿಯನ್ನು ಸಾಲವನ್ನು ಹೊಂದಿದ್ದ ರೈತನಿಂದ ಹಿಂದಕ್ಕೆ ತೆಗೆದುಕೊಂಡು, ಹಾಗೆಯೇ ಸಮಾಜದ ಮೂಲಕ ಸಮಯಬಂದಾಗಲೆಲ್ಲ ಒಬ್ಬರಿಗೊಬ್ಬರು ಸಹಾಯ ಮಾಡಿದರೆ ಅದರಿಂದ ಬಹುಪ್ರಯೋಜನವಾಗುತ್ತೆ. ಈ ಮಾರ್ಗವನ್ನು ಬಿಟ್ಟು, ರೈತರು ಈಗ ಪ್ರತ್ಯೇಕಪ್ರತ್ಯೇಕವಾಗಿದ್ದುಕೊಂಡು, ಒಬ್ಬರ ಅನುಕೂಲವನ್ನು ಮತ್ತೊಬ್ಬರು ನೋಡದೆ ಇರುವದರಿಂದಲೇ ಸಾಹುಕಾರನ ಕೈಯಲ್ಲಿ ಸಿಕ್ಕಿ ಅನೇಕರು ದರಿದ್ರರಾಗಿದಾರೆ. ವ್ಯವಸಾಯದ ಬ್ಯಾಂಕುಗಳು ಸ್ಥಾಪಿಸಲ್ಪಟ್ಟರೆ, ಬಹುಮಟ್ಟಿಗೆ ಈ ತೊಂದರೆಯು ತಪ್ಪಿ ರೈತರು ಉತ್ತಮಸ್ಥಿತಿಯಲ್ಲಿರುವರೆಂದು ಹೇಳಬಹುದು.

ಆದರೆ ವ್ಯವಸಾಯದ ಬ್ಯಾಂಕುಗಳ ಮುಖ್ಯ ಉದ್ದೇಶವು ಲಾಭವನ್ನು ಅಧಿಕವಾಗಿ ಪಡೆಯಬೇಕೆಂದಿರಕೂಡದು; ಬ್ಯಾಂಕಿಗೆ ಸೇರಿದ ಜನರಿಗೆ ತಮಗೆ ನಷ್ಟವಿಲ್ಲದಂತೆ ಅನುಕೂಲಪಡಿಸಬೇಕಾದ್ದೇ ತಮ್ಮ ಕರ್ತವ್ಯವೆಂದು ಭಾವಿಸಿ ಅವರಂತೆ ನಡೆಯಬೇಕು. ಲಾಭಕ್ಕಾಗಿ ಏರ್ಪಡಿಸಲ್ಪಟ್ಟ ಸಮಾಜವೆಂದು ಈ ಬ್ಯಾಂಕುಗಳನ್ನು ಎಂದಿಗೂ ತಿಳಿಯಕೂಡದು. ಕೊಟ್ಟಹಣವು ನಷ್ಟವಾಗದಂತೆಯೂ, ಸಾಲ ತೆಗದುಕೊಂಡ ಮೆಂಬರಿಗೆ ಮಿತವಾದ ಬಡ್ಡಿಯಲ್ಲಿ ಸಾಲ ದೊರೆಯುವಂತೆ ನೋಡಿಕೊಳ್ಳುವದೇ ವ್ಯವಸಾಯದ ಬ್ಯಾಂಕುಗಳು ಮಾಡಬೇಕಾದ್ದೊದಲನೇ ಕೆಲಸವಾಗಿದೆ. ಹೀಗೆ ಮಿತವಾದ ಬಡ್ಡಿ ದೊರೆಯಬೇಕಾದರೆ ಸಾಲಗಾರರು ಮೋಸಗಾರರಲ್ಲವೆಂದು ವ್ಯಕ್ತಪಡಿಸಿ

ಕೊಂಡಪೊರತು ಸಾಲವನ್ನು ಪಡೆಯುವದಕ್ಕೆ ಅರ್ಹರಲ್ಲವೆಂದು ಎಣಿಸಬೇಕು. ಮೋಸಗಾರರಲ್ಲದೆ ಇರುವ ರೈತರಿಗೆ, ಅವರು ಸಾಲತೆಗೆದುಕೊಳ್ಳುವ ಹಣವನ್ನು ವ್ಯವಸಾಯಕ್ಕಾಗಿಯೇ ಉಪಯೋಗಿಸುತ್ತಾರೆಂದು ತಿಳಿದಕೂಡಲೆ ಧಾರಾಳವಾಗಿ ಸಾಲವನ್ನು ಕೊಡಬೇಕು. ಅನೇಕ ವೇಳೆಗಳಲ್ಲಿ ರೈತನು ಸಾಹುಕಾರನ ತಗಾದೆಗೆ ಹಣವನ್ನು ಕಾಲವಿಳಂಬವಿಲ್ಲದೆ ಒಪ್ಪಗಿಸಿ ತೀರಿಸಬೇಕಾಗುವದರಿಂದ, ತನ್ನ ದನಕರುಗಳನ್ನೂ, ಜಮೀನನ್ನೂ, ತಾನಾಗಿಯೇ ಮೇಲುಬಿದ್ದು ಮಾರಬೇಕಾಗಿ ಬರುವದ್ದರಿಂದ ಬಹುನಷ್ಟಪಡುತ್ತಾನೆ. ವ್ಯವಸಾಯದ ಬ್ಯಾಂಕುಗಳು ಈ ಸಮಯದಲ್ಲಿ ಅವನಿಗೆಸಹಾಯಮಾಡಿದರೆ ನಷ್ಟುನೀರಿನಲ್ಲಿ ಕೈಬಿಡಲ್ಪಟ್ಟ ಮನುಷ್ಯನನ್ನು ದಡಕ್ಕೆ ತಂದುಹಾಕಿ ಪ್ರಾಣವನ್ನು ಉಳಿಸಿ ದಂತಾಗುವುದು.

ವ್ಯವಸಾಯದ ಬ್ಯಾಂಕುಗಳಿಂದ ರೈತರಿಗೆ ಬಹಳ ಪ್ರಯೋಜನವಾಗುವದೆಂಬುದಕ್ಕೆ ಅನೇಕ ದೃಷ್ಟಾಂತಗಳು ಕೊಡಬಹುದು. ಯೂರೋಪಿಯರ್ಯ ದೇಶಗಳಲ್ಲಿ ಈ ವಿಧವಾದ ಬ್ಯಾಂಕುಗಳು ಅನೇಕ ಇವೆ; ಅವುಗಳಿಂದ ರೈತರು ಹೊಂದಿರುವ ಉಪಕಾರ ಇಷ್ಟೆಂದು ಹೇಳುವದಕ್ಕಾಗುವದಿಲ್ಲ. ಒಂದೆರಡು ಬ್ಯಾಂಕುಗಳ ವಿಚಾರವನ್ನು ಸ್ವಲ್ಪಹೇಳಲಾಗಿ ಈ ಅಂಶವು ವ್ಯಕ್ತವಾಗುವದು. 1849ನೇ ಇಸವಿಯಲ್ಲಿ, ಜರ್ಮನಿ ದೇಶದ ಫ್ರಾನ್ಸ್ಯಮರಸಫೀಲ್ಡ್ ಎಂಬ ಪ್ರಾಂತ್ಯದಲ್ಲಿದ್ದ ರೇಫೈಸ್ಸ್ ಎಂಬಾತನು, ಅಲ್ಲಿನ ರೈತರು ಸ್ಥಾಲಗಾರರ ಪಾಶಕ್ಕೆ ಬಳಿಗಾಗಿ ಕೈಕಾಲು ಅಲ್ಲಾಡಿಸುವದಕ್ಕಿಲ್ಲದೆ ಸಂಕಟಪಡುತ್ತಿರುವದನ್ನು ನೋಡಿ, ಕನಿಕರಪಟ್ಟು, ರೈತರಿಗೆ ಸಹಾಲಕೊಡುವ ಬ್ಯಾಂಕು ಒಂದನ್ನು ಏರ್ಪಡಿಸಿದನು. ಇವನು ಆಗ ಹಾಕಿದ ಸಣ್ಣ ಬೀಜವು ದೊಡ್ಡ ಮರವಾಗಿ ಅನೇಕ ಕವಲು ಬಿಡೆದು ಎಲ್ಲಾಕಡೆಯಲ್ಲಿಯೂ ಹರಡಿಕೊಂಡು ಬಹುಜನರಿಗೆ ಆಶ್ರಯವಾಗುವದೆಂದು ಸ್ವಪ್ನದಲ್ಲಿಯಾದರೂ ಯಾರೂ ತಿಳಿದಿರಲಿಲ್ಲ. ಆದರೆ ಈಚಿಗೆ ನಲವತ್ತು ವರುಷಗಳಲ್ಲಿ ಜರ್ಮನಿದೇಶವೊಂದರಲ್ಲಿಯೇ 1,250 ಬ್ಯಾಂಕುಗಳು ಸ್ಥಾಪಿಸಲ್ಪಟ್ಟಿವೆ; ಇದಲ್ಲದೆ ಆಸ್ಟ್ರಿಯ, ಇಟಲಿ, ಫ್ರೆಂಚ್, ಪೊಲಾಂಡ್, ಟ್ರಾನಸಿಲ್ವೇನಿಯ, ರೋಮೇನಿಯ ಮುಂತಾದ ದೇಶಗಳಲ್ಲಿಯೂ ಹರಡಿಕೊಂಡಿವೆ. ಈ ವಿಧವಾದ ಬ್ಯಾಂಕನ್ನು ಮೊದಲು ಸ್ಥಾಪಿಸಿದ ರೇಫೈಸ್ಸ್ ಎಂಬಾತನು ಮೂಲಧನಕ್ಕಾಗಿ ಜನರಿಂದ ಷೇರು ಹಣವನ್ನು ಕೇಳಲಿಲ್ಲ; ತಾನೇ ಶ್ರಮಪಟ್ಟು ಸುಮಾರು 30 ಪೌನುಗಳನ್ನು ಸೇರಿಸಿ ಕೆಲಸಕ್ಕೆ ಆರಂಭಿಸಿದನು. ಬ್ಯಾಂಕಿನ ಆಡಳಿತವು ಸಮರ್ಪಕವಾಗಿದ್ದುದರಿಂದ ಜನರು ತಾವು ಕೂಡಿಸಿದ ಹಣವನ್ನು ಇವನ ಬ್ಯಾಂಕಿನಲ್ಲಿಡುವದಕ್ಕೆ ಉಪಕ್ರಮಿಸಿದರು; ಕೆಲವರು ಡಿಪಾಜಿಟ್ಟುಗಳನ್ನು ಇಡುತ್ತಿದ್ದರು; ಇದಲ್ಲದೆ ನಂಬಿಕೆ ಚನ್ನಾಗಿದ್ದುದರಿಂದ ಸುಲಭ ಬಡ್ಡಿಗೆ ಇತರ ಕಡೆಯಿಂದ ಸಾಲತಂದು ರೈತರಿಗೆ ಅವಕ್ಕಿಂತ ಸ್ವಲ್ಪ ಹೆಚ್ಚು ಬಡ್ಡಿಗೆ ಕೊಟ್ಟು ಸಹಾಯಮಾಡುತ್ತಿದ್ದನು. ಬ್ಯಾಂಕಿನ ಉದ್ಯೋಗಸ್ಥರಿಗೆ ಸಂಬಳಗಳು ಕೊಡತಕ್ಕ ಪದ್ಧತಿಯಿಲ್ಲ; ಕ್ಯಾಷಿಯರ್ ಎಂಬ ಒಬ್ಬ ಉದ್ಯೋಗಸ್ಥನಿಗೆ ಮಾತ್ರ ಸ್ವಲ್ಪ ಸಂಬಳವನ್ನು ಕೊಡುತ್ತಾರೆ. ಈ ಬ್ಯಾಂಕುಗಳಲ್ಲಿಟ್ಟ ಹಣವು ನಷ್ಟವಾಗುವದಿಲ್ಲವೆಂದು ಜನರಿಗೆ ಸಂಪೂರ್ಣವಾಗಿ ನಂಬಿಕೆಯುಂಟಾಗಿದೆ. ಇದಕ್ಕೆ ಕಾರಣವೇನಂದರೆ—ಹಣವು ನಷ್ಟವಾದಲ್ಲಿ ಆ ಹಣಕ್ಕೆ ಬ್ಯಾಂಕಿಗೆ ಸೇರಿದ ಜನರೆಲ್ಲರೂ ಜವಾಬ್ದಾರರಾಗಿರುತ್ತಾರೆ. ಆದ್ದರಿಂದ ಬ್ಯಾಂಕಿನ ಸಾಲಗಾರರು ಅವರ ಕಡಿ ಮಿಠಾರಿ ಸಾಲಮಾಡದಂತೆ ಬ್ಯಾಂಕಿಗೆ ಸೇರಿದ ಪ್ರತಿಯೊಬ್ಬನು ಜಾಗರೂಕನಾಗಿರುವದರಿಂದ ನಷ್ಟಕ್ಕೆ ಅವಕಾಶವಿಲ್ಲ.

ಸಾಲಗಾರರಿಂದ ಈ ಬ್ಯಾಂಕುಗಳು ಯಾವಾಗಲೂ ನಷ್ಟಹೊಂದಿಲ್ಲ. ಅದು ಹ್ಯಾಗೆಂದರೆ, ಬ್ಯಾಂಕಿಗೆ ಸೇರಿದ ಜನರಿಗಲ್ಲದೆ ಇತರರಿಗೆ ಸಾಲವು ದೊರೆಯುವದಿಲ್ಲ. ಯಾವನಾದರೂ ಬ್ಯಾಂಕಿಗೆ ಮೆಂಬರಾಗ ಬೇಕೆಂದು ಇಷ್ಟಪಟ್ಟರೆ, ಬ್ಯಾಂಕಿಗೆ ಸೇರಿರುವವರ ಸಮ್ಮತಿಯಾದಹೊರತು ಸೇರುವದಕ್ಕೆ ಅವಕಾಶವಿಲ್ಲ. ಹೀಗಿರುವದ್ದರಿಂದ ಹುರಳಿಲ್ಲದವರು ಸೇರಿದರೆ, ಅವರುಮಾಡಿದ ಸಾಲವನ್ನು ಇತರರು ತೀರಿಸಬೇಕಾಗುವದರಿಂದ, ಸೇರುವದಕ್ಕೆ ಇಷ್ಟಪಡುವ ಮನುಷ್ಯನು ಪ್ರಾಮಾಣಿಕನೆಂದು ಸ್ಪಷ್ಟವಾಗಿ ಎಲ್ಲರಿಗೂ ತಿಳಿಯ ಬಂದ ಹೊರತು ಸೇರುವದಕ್ಕೆ ಮಾರ್ಗಕೊಡುವದಿಲ್ಲ. ಸೇರಿದ ಎಲ್ಲಾಮೆಂಬರುಗಳಿಗೂ ಬ್ಯಾಂಕಿನ ಆಡಳಿತಗಳನ್ನು ವಿಚಾರಮಾಡುವ ಅಧಿಕಾರವು ಬಂದೇಸಮವಾಗಿದೆ. ಮೆಂಬರುಗಳೆಲ್ಲರೂ ಬಂದೇ ಸಮವಾದ ಅಧಿಕಾರವುಳ್ಳವರಾದ್ದರಿಂದ ಸಭೆಕೂಡಿದ ಕಾಲದಲ್ಲಿ ಎಲ್ಲರೂ ಸೇರಿ ಚರ್ಚಿಸುತ್ತಾರೆ. ಕೆಲವರು ಬರುವದು, ಕೆಲವರು ಬರದೆ ಇರುವದು, ಆಡಳಿತಗಳು ಸಮರ್ಪಕವಾಗಿದೆ, ಇಲ್ಲವೆಂದು ವಿಚಾರಮಾಡದೆ ಇರುವದು, ಹೀಗೇ ನಡೆಯುವದಿಲ್ಲ. ಸಾಲತೆಗೆದುಕೊಂಡವನು ಸಾಮಾನ್ಯವಾಗಿ ಇಬ್ಬರು ಮನುಷ್ಯರನ್ನು ಹಣಕ್ಕಾಗಿ ಜಾಮೀನು ಕೊಡಬೇಕು; ಇದಲ್ಲದೆ ಹಣವನ್ನು ವ್ಯವಸಾಯಕ್ಕೆ ಸಂಬಂಧಪಟ್ಟ ಯಾವಕೆಲಸಕ್ಕೆ ಉಪಯೋಗಿಸುತ್ತಾನೋ ಅದನ್ನು ಬ್ಯಾಂಕಿನ ಅಧಿಕಾರಿಗಳಿಗೆ ತಿಳಿಸಬೇಕು. ಬಂದುವೇಳೆ ಹಣವನ್ನು ದುರುಪಯೋಗ ಮಾಡುವನೆಂದು ಬ್ಯಾಂಕಿನವರಿಗೆ ತಿಳಿದು ಬಂದರೆ ಅವರು ಅವನಿಗೆ ನಾಲ್ಕುವಾರಗಳ ನೋಟೀಸನ್ನು ಕೊಟ್ಟು ಹಣವನ್ನು ಹಿಂದಕ್ಕೆ ಬರಮಾಡಿಕೊಳ್ಳಬಹುದು. ವಾಯಿದೆಗೆ ಸರಿಯಾಗಿ ಹಣವನ್ನು ಸಾಲಗಾರನು ಹಿಂದಕ್ಕೆ ಕೊಡಬೇಕು. ನಿತ್ಯಗಟ್ಟಳಿ ಕೆಲಸಗಳು ನಡಿಯತಕ್ಕ ಬಗ್ಗೆ ಮೆಂಬರುಗಳಿಂದ ಚುನಾಯಿಸಲ್ಪಟ್ಟ ಕಮಿಟಿಯೊಂದಿರುತ್ತೆ. ಈ ಕಮಿಟಿಯಲ್ಲಿ ಐದು ಜನರು ಇರುತ್ತಾರೆ. ಇವ

ರುವಾಡಿದ ಕೆಲಸಗಳು ಸರಿಯಾಗಿವೆ ಎಂದು ವಿಚಾರ ಮಾಡುವದಕ್ಕೆ ಮೇಲ್ವಿಚಾರಣೆ ಮಾಡತಕ್ಕ ಕಮಿಟಿ ಮು ತ್ತೊಂದು ಇದೆ. ಇದರಲ್ಲಿ ಸಾಮಾನ್ಯವಾಗಿ 6ರಿಂದ 9ರವರಿಗೆ ಮೆಂಬರುಗಳಿರುತ್ತಾರೆ. ಇವರು ಸರಿಯಾದ ಜನರಿಗೆ ಸಾಲವು ಕೊಡಲ್ಪಟ್ಟಿದೆಯೆಂದೂ ಕಟ್ಟಳೆಗಳೆಲ್ಲಾ ಕ್ರಮವಾಗಿ ಅನುಸರಿಸಲ್ಪಟ್ಟಿವೆ ಎಂದೂ, ಯಾವ ವಿಧದಲ್ಲಿಯೂ ಹಣವು ನಷ್ಟವಾಗುವದಕ್ಕೆ ಮಾರ್ಗವಿಲ್ಲವೆಂದೂ ವಿಚಾರಮಾಡಿ ಮನಸ್ಸಿಗೆ ಸಮರ್ಪಕ ಮಾಡಿಕೊಳ್ಳಬೇಕಾಗಿದೆ. ರಿಜರ್ವ್ ಫಂಡಿಗೆ ಸೇರಿಸಿದ ಹಣವನ್ನು ಮೆಂಬರುಗಳು ಹಂಚಿಕೊಳ್ಳಕೂಡದು; ಒಂದುವೇಳೆ ಯಾವ ಕಾರಣದಿಂದ ಲಾದರೂ ಬ್ಯಾಂಕನ್ನು ಮುಚ್ಚಿ ಬಿಡಬೇಕಾದರೆ ಅದೇರೀತಿಯಲ್ಲಿ ಏರ್ಪಡಿಸಲ್ಪಡುವ ಬೇರೆಬ್ಯಾಂಕಿಗಾದರೂ ಆಥವ ಯಾವದಾದರೂ ಧರ್ಮಕೆಲಸಕ್ಕೆ ಕೊಡಬೇಕೆಂದು ನಿಷ್ಕರ್ಷೆಯಾಗಿದೆ. ಈ ಕಟ್ಟಳೆಗಳಿರುವದರಿಂದ ಹಣವು ನಷ್ಟವಾಗುವದಕ್ಕೆ ಅವಕಾಶವೇ ಇಲ್ಲ. ಬ್ಯಾಂಕಿನ ಡಿವಾಜಿಟ್ಟು ಮುಂತಾದ್ದು ಕೊಟ್ಟಿರುವ ಜನರಿಗೆ ಬ್ಯಾಂ ಕಿಗೆ ಮೆಂಬರುಗಳಾಗಿ ಸೇರಿರುವವರ ಆಸ್ತಿಯೆಲ್ಲ ಆಧಾರವಾದಂತಿರುತ್ತೆ. ಸಾಲ ತೆಗೆದುಕೊಂಡವರು ಯಾವ ಕೆಲ ಸಕ್ಕೆ ಸಾಲ ತೆಗೆದುಕೊಳ್ಳುತ್ತಾರೋ ಅದೇ ಕೆಲಸಕ್ಕೆ ಉಪಯೋಗಿಸಬೇಕಾದ್ದರಿಂದಲೂ, ಅದಕ್ಕೆ ತಕ್ಕ ಜಾ ಮೀನುಗಳು ಕೊಟ್ಟಿರುವದರಿಂದಲೂ, ವಾಯಿದೆಗೆ ಸರಿಯಾಗಿ ಕೊಡಬೇಕಾದುದರಿಂದಲೂ, ಬ್ಯಾಂಕಿಗೆ ನಷ್ಟ ಸಂಭವಿಸುವದಕ್ಕೆ ಮಾರ್ಗವಿಲ್ಲ. ಇದರಿಂದ ಮೊದಲು ಸ್ಥಾಪಿಸಿದ ಬ್ಯಾಂಕು ವೃದ್ಧಿಯನ್ನು ಹೊಂದಿ ಅನೇಕ ಶಾಖೆಗಳಾಯಿತು.

ಈ ಶಾಖೆಗಳೂ ಕೆಲವು ಕೆಲವು ಸೇರಿ ಪ್ರೊವಿನ್ಷಿಯಲ್ ಯೂನಿಯರ್ಗಳೆಂಬದಾಗಿಯೂ ಇವೆ; ಇದಲ್ಲದೆ ಸೆಂಟ್ರಲ್ ಯೂನಿಯರ್ ಎಂಬದಾಗಿ ಎಲ್ಲಕ್ಕೂ ಪ್ರಧಾನವಾದ ಒಂದು ಬ್ಯಾಂಕು ಇದೆ. ಈ ಬ್ಯಾಂಕಿನಲ್ಲಿ 250,000 ಪೌನುಗಳು ಈಗ ಮೂಲಧನವಿದೆ. ಶಾಖೆಗಳಾದ ಬ್ಯಾಂಕುಗಳಲ್ಲಿ ಹೆಚ್ಚಾಗಿನಿಂತಿರುವ ಹಣವನ್ನು ವರ್ಷಕ್ಕೆ ಸೇಕಡ 3½ ಯಿಂದ 4ರಂತೆ ಬಡ್ಡಿಗೊತ್ತು ಮಾಡಿ ತೆಗೆದುಕೊಂಡು ಅವರಿಗೆ ಬೇಕಾದಾಗ $4\frac{1}{4}$, $4\frac{1}{2}$ ಎಂತೆ ಬಡ್ಡಿಗೆ ಪುನಃ ಕೊಡುತ್ತಾರೆ. ಈ ಸೆಂಟ್ರಲ್ ಬ್ಯಾಂಕಿನ ಸಂಗಡ ವ್ಯಾಪಾರದ ಬ್ಯಾಂಕೊಂದು ಏರ್ಪಟ್ಟು ಆದರಿಂದಲೂ ಜನರಿಗೆ ಬಹುಪ್ರಯೋಜನವಾಗಿದೆ.

ರೇಫೇಜ್ ಸ್ಥಾಪಿಸಿದ ಬ್ಯಾಂಕುಗಳು ಬಹುಪ್ರಯೋಜನಕಾರಿಗಳೆಂದು ಅವುಗಳನ್ನು ನೋಡಿದವರೆಲ್ಲರೂ ಒಪ್ಪಿರುತ್ತಾರೆ. 1874ನೇ ಇಸವಿಯಲ್ಲಿ ಜರಮನೀ ದೇಶದ ಚಕ್ರವರ್ತಿಗಳಾದ ವಿಲಿಯಮ್ಸ್ ಎಂಬವರು ವಿಚಾ ರಣೆಯ ಮೂಲಕ ಅವುಗಳ ಪ್ರಯೋಜನವನ್ನು ತಿಳಿದು ರಿಜರ್ವ್ ಫಂಡಿಗೆ 1,500 ಪೌನುಗಳನ್ನು ಉಚಿತವಾಗಿ ಕೊಟ್ಟರು. ಮಲ್‌ಹೀನ್ಸ್ ಎಂಬ ಗ್ರಾಮದಲ್ಲಿ ಜ್ಯೂಸ್ ಜಾತಿಯ ಸಾಹುಕಾರರಿಂದ ರೈತರು ಬಹುಸಂಕಟಪಡು ತ್ತಿದ್ದರು. 1880ನೇ ಇಸವಿಯಲ್ಲಿ ಅಲ್ಲಿ ಒಂದು ಬ್ಯಾಂಕು ಸ್ಥಾಪಿಸಲ್ಪಟ್ಟಿತು. ಈಗ ಸುಮಾರು 250 ಮಂದಿ ಬ್ಯಾಂಕಿಗೆ ಮೆಂಬರುಗಳಾಗಿದಾರೆ. ಜ್ಯೂಸ್ ಜಾತಿಯ ಸಾಹುಕಾರರಿಗೆ ತೆರುತ್ತಿದ್ದ ಬಡ್ಡಿ ತಪ್ಪಿ, ಜನರು ಸಾ ಖ್ಯವನ್ನು ಪಡೆದಿರುತ್ತಾರೆ. ವ್ಯವಸಾಯಕ್ಕೆ ಬೇಕಾಗುವ ಯಂತ್ರಗಳ ಬೆಲೆಯು ಹೆಚ್ಚಾಗಿದ್ದಲ್ಲಿ ಬ್ಯಾಂಕಿ ನವರು ಆದನ್ನು ಕೊಂಡುಕೊಂಡು ಮೆಂಬರುಗಳಿಗೆ ಸುಲಭ ದರದಲ್ಲಿ ಬಾಡಿಗೆಗೆ ಕೊಡುತ್ತಾರೆ. ತುರಂಗಿಯು ಎಂಬ ಸ್ಥಳದಲ್ಲಿಯೂ ರೈತರಿಗೆ ಈ ರೀತಿಯೆ ಅನುಕೂಲಗಳುಂಟು. ಅಲ್ಲಿ ಬ್ಯಾಂಕು ಸ್ಥಾಪಿತವಾಗುವದಕ್ಕೆ ಮುಂಚೆ ರೈತರು ಹೆಂಡಕುಡಕರಾಗಿ, ಮನೆಬಾಗಿಲುಗಳನ್ನು ಆಡವು ಹಾಕಿಕೊಂಡು ಜೀವನಕ್ಕೆಲ್ಲದೆ ತೊಂದರೆ ಪಡುತ್ತಿದ್ದರು. ಇದೆಲ್ಲಾ ಈಗ ತಪ್ಪಿ, ಬ್ಯಾಂಕಿಗೆ ಸೇರಿದ ಮೆಂಬರುಗಳಿಗೆ ವಾಸಕ್ಕೆ ಮನೆಗಳನ್ನು ಮಾಡಿಕೊ ಟ್ಟು, ಇನ್ನೂ ಇತರ ವಿಧವಾಗಿಯೂ ಬ್ಯಾಂಕಿನವರು ಸಹಾಯ ಮಾಡಿದಾರೆ. ವರ್ಷ ಬಂದಕ್ಕೆ ಸೇಕಡ 4½ ಎಂತೆ ಬಡ್ಡಿ ಸೇರಿಸಿ 6 ಪೌನು 12 ಷಿಲಿಂಗು ಕೊಡುವಂತೆ ಒಪ್ಪಿದ ಮೆಂಬರಿಗೆ 60 ಪೌನು ಬಾಳುವ ಮನೆಯ ನ್ನು ಕಟ್ಟಿಸಿಕೊಟ್ಟು ಐಸ್ತು ಪ್ರಕಾರ ಹಣ ತೆಗೆದುಕೊಳ್ಳುತ್ತಾರೆ. ದುರ್ಭಿಕ್ಷ ಉಂಟಾಗಬಹುದೆಂದು ತೋರಿ ದಾಗ ಅದು ಉಂಟಾಗುವದಕ್ಕೆ ಮುಂಚೆ ಧಾನ್ಯಗಳನ್ನು ತೆಗೆದಿಟ್ಟು, ಅದು ಬಂದಕಾಲದಲ್ಲಿ ಧಾರಣೆ ಹೆಚ್ಚಾಗಿ ದ್ದರೂ ಪೂರ್ವದ ಧಾರಣೆಗೆ ಮಾರಿ ಮೆಂಬರುಗಳು ವಿಶೇಷಪ್ರಯಾಸವಿಲ್ಲದೆ ದುರ್ಭಿಕ್ಷವನ್ನು ಕಳೆಯುವಂತೆ ಮಾಡುತ್ತಾರೆ. ಇದಲ್ಲದೆ ದನಕರುಗಳಿಗೆ ಹುಲ್ಲು ಇಲ್ಲದೆ ಅವುಗಳನ್ನು ಸುಲಭ ಕ್ರಯಕ್ಕೆ ಕೂಡಾಯಾರೂ ತೆಗೆ ದುಕೊಳ್ಳದೆ ಇರುವಾಗ ಮೆಂಬರುಗಳಿಂದ ಅವುಗಳನ್ನು ತೆಗೆದುಕೊಂಡು, ಪುನಃ ಸುಭಿಕ್ಷ ಉಂಟಾದಾಗ ಅವನಿಗೆ ಮಾರುತ್ತಾರೆ. ರೇಫೇಜನಿನ ಬ್ಯಾಂಕುಗಳು ಎಲ್ಲೆಲ್ಲಿ ಸ್ಥಾಪಿಸಲ್ಪಟ್ಟಿವೆಯೋ ಆಲ್ಲೆಲ್ಲಾ ರೈತರಿಗೆ ದಾರಿದ್ರ್ಯವು ಕಡಮೆಯಾಗಿ, ಮಿತವಾಗಿ ವ್ಯಯಮಾಡುವ, ಕ್ರಮವಾಗಿ ಸಾಲಗಳನ್ನು ತೀರಿಸುವ, ಕ್ರಮ ತಪ್ಪಿ ನಡೆಯದೆ ಇರುವ ಸದಾಚಾರಗಳನ್ನು ಅವರು ಕಲಿತಿದಾರೆ.

ಫ್ರಾನ್ಸ್ ದೇಶದ ಪಲ್ಯೆನಿ ಎಂಬ ಸ್ಥಳದಲ್ಲಿಯೂ, ರೈತರಿಗೆ ಸಹಾಯಮಾಡತಕ್ಕ ಬ್ಯಾಂಕುಗಳಿವೆ. ಇಟಲಿ ದೇಶದಲ್ಲಿಯೂ ಇದೇ ಪ್ರಕಾರ ಇವೆ. ಆದರೆ ಇವುಗಳಲ್ಲಿ ಷೇರುಗಳಮೂಲಕ ಮೂಲ ಧನವನ್ನು ಕೂಡಿಸಿರುವೆದರಿಂದಲೂ, ಷೇರುದಾರರುಗಳಲ್ಲಿ ತಾರತಮ್ಯಗಳಿರುವದರಿಂದಲೂ, ರೇಫೇಜ್ ಬ್ಯಾಂಕುಗಳಷ್ಟು

ವೃದ್ಧಿಗೆ ಬಂದಿಲ್ಲ. ಆದರೂ ಅವುಗಳಿಂದ ಜನರಿಗೆ ಬಹು ಪ್ರಯೋಜನ ಉಂಟಾಗಿದೆ ಎಂಬುವದಕ್ಕೆ ಸಂದೇಹ ವಿಲ್ಲ. ಈ ಬ್ಯಾಂಕುಗಳು ಮೆಂಬರುಗಳಿಗೆ ಎಷ್ಟೆಷ್ಟು ಸಾಲಾ ಕೊಡಬಹುದೆಂದು ಮೊದಲೇ ವಿಚಾರಿಸಿ, ಅವರು ಹೆಸರುಗಳನ್ನೂ, ಕೊಡಬಹುದಾದ ಹಣವನ್ನು ಒಂದು ಪಟ್ಟಿಯಲ್ಲಿ ಬರೆದಿಟ್ಟಿದ್ದು, ಸಾಲಾ ಕೇಳಿದ ವೇಳೆಯಲ್ಲಿ ಪಟ್ಟಿಯನ್ನು ನೋಡಿ ಅಲ್ಲಿರುವ ಮೊಬಲಗಿಗೆ ಮೀರದೆ ಕೊಡುವದ್ದರಿಂದ ನಷ್ಟವಾಗೊಂದದೆ ಜರ್ಮನಿದೇಶದ ಬ್ಯಾಂಕುಗಳಂತೆ ವೃದ್ಧಿಗೆ ಬಂದಿವೆ.

ಪ್ರಕೃತ, ನಮ್ಮ ದೇಶದಲ್ಲಿ ಮೇಲೆ ವಿವರಿಸಿದಂತೆ ಜನರಲ್ಲಿ ಪರಸ್ಪರ ನಂಬಿಕೆಯುಂಟಾಗುವದಕ್ಕೆ ಇನ್ನೂ ಸ್ವಲ್ಪಕಾಲ ಬೇಕಾಗುವದರಿಂದ, ಅಂಥಾ ನಂಬಿಕೆಯುಂಟಾಗುವವರಿಗೂ ಸರಕಾರದವರ ಸಹಾಯ ಅವಶ್ಯಕವಾಗಿದೆ. ಈ ದೇಶದ ಏರ್ಪಾಡಾಗಬೇಕಾದ ವ್ಯವಸಾಯದ ಬ್ಯಾಂಕುಗಳ ರೀತಿ ಮತ್ತು ಅವುಗಳ ಮುಖ್ಯ ಆಕಲ್ಪಗಳು ಯಾವವೆಂದರೆ—

ಒಂದೇ ಗ್ರಾಮದಲ್ಲಿ ಆಗಲಿ ಅಥವಾ ಒಂದಕ್ಕೊಂದು ಸಮೀಪ ಇರತಕ್ಕ 2—3 ಗ್ರಾಮಗಳಲ್ಲಾಗಲಿ ವಾಸ ಮಾಡಿಕೊಂಡಿರುವವರಾಗಿಯೂ ಜಮೀನ್ ಹಿಡುವಳಿದಾರಾಗಿಯೂ ಆರಂಭ-ಕೆಲಸವನ್ನು ಆಸಕ್ತಿಯಿಂದ ಮಾಡಿಕೊಂಡು ಒಳ್ಳೇ ನಡತೆಯಲ್ಲಿ ಇರುವವರಾಗಿಯೂ ನಂಬಿಕೆಯುಳ್ಳವರಾಗಿಯೂ ಇರುವ ರೈತರು 40—50 ಜನಗಳವರಿಗೆ ಕಲತು ಬಂದು ಸಂಘವನ್ನು ಏರ್ಪಡಿಸಿಕೊಂಡು ತಮ್ಮ ಸಮೂಹದ್ದಜವಾಬ್ದಾರಿಮೇಲೆ ಸುಲಭವಾದ ಬಡ್ಡೀಗೆ ಸರ್ಕಾರದಿಂದಲಾಗಲಿ ಅಥವಾ ಇತರ ಜನಗಳಿಂದಾಗಲಿ ಧನ ಬದಗಿಸಿಕೊಂಡು ತಮ್ಮೊಳಗೇನೇ ಆರಂಭ ಮುಂತಾವ ಕೆಲಸಗಳಿಗೆ ಬೇಕಾವ ಖರಜು ತಾವ್ರುಗಳೀ ಆ ಸಂಘದಿಂದ ಆಗಿಂದಾಗ್ಗೆ ಸಾಲವಾಗಿ ತೆಗೆದುಕೊಂಡಲ್ಲಿ ಆ ಮೊಬಲಗಿಗೆ ತೆರಬೇಕಾದ ಬಡ್ಡಿಯು ಸುಲಭವಾಗಿ ಇರುವದು. ಮಸಲಾ ಈ ಸಂಘದ 50 ಮೆಂಬರುಗಳು ಒಬ್ಬೊಬ್ಬರು 500 ರೂಪಾಯಿಗಳು ಉಪಯೋಗಿಸಿಕೊಳ್ಳುವದಕ್ಕೆ ಅಪೇಕ್ಷಿಸಿದರೆ, 25,000 ರೂಪಾಯಿಗಳು ಬೇಕಾಗುವದು. ಈ ಮೊಬಲಗನ್ನು ವರ್ಷಕ್ಕೆ ಸೇಕಡ ನಾಲ್ಕುರೂಪಾಯಿಗಳಂತೆ ಬಡ್ಡಿಗೆ ಸರ್ಕಾರದಿಂದ ಬದಗಿಸಲ್ಪಟ್ಟಲ್ಲಿ ಈಗ ಸಾಮಾನ್ಯವಾಗಿ ತೆರುವ ಸುಮಾರು ಸೇಕಡ (12) ರೂಪಾಯಿನ ಬಡ್ಡಿಗೆ ಬದುಲಾಗಿ ಅದರ ($\frac{1}{3}$) ಮೂರರಲ್ಲಿ ಬಂದು ಭಾಗದ ದರಕ್ಕೇನೆ ಭಾರಿಯಾದ ಮೊಬಲಗು ದೊರಕಿದಂತೆ ಆಗುತ್ತೆ. ಈ ಸಂಘದವರು ತಮ್ಮ ಮೆಗಳಲ್ಲಿ ಯಾರಿಗೆ ಹಣ ಅವಶ್ಯವಿದೆಯೋ ಅಂಥಾವರ ಸ್ಥಿತಿ ನಂಬಿಕೆ ಮುಂತಾದವುಗಳ ಪರಿಶೀಲನೆಯಿಂದ ಅವರ ಸ್ವಂತ ಆಸ್ತಿಯ ಅಧಾರದ ಮೇಲಾಗಲಿ ಅಥವಾ ಇತರ ಜಾಮೀನಿನೆಮೇಲಾಗಲಿ ಸೇಕಡ ವರ್ಷಕ್ಕೆ ಆರು ರೂಪಾಯಿನ ದರದ ಬಡ್ಡಿಗೆ ಸಾಲವನ್ನು ಕೊಡಬಹುದು. ಈರೀತಿ ನಡಿಸುವದರಿಂದ ಸಂಘಕ್ಕೆ ಬಡ್ಡಿಯಲ್ಲಿ ಎರಡು ರೂಪಾಯಿನಂತೆ ಮಿಗುತ್ತೆ. ಇದರಲ್ಲಿ ಬ್ಯಾಂಕ್ ಸಿಬ್ಬಂದಿ ಖರ್ಚುಕಳೆದು ನಿಲ್ಲುವ ಹಣವನ್ನು ರಿಜರ್ವ್ ಫಂಡಿಗಾಗಿ ಇಡುತ್ತಾ ಬಂದಲ್ಲಿ ದಿನಕ್ರಮೇಣ ಈ ಮೊಬಲಗು ಹೆಚ್ಚುತ್ತಾ ಬರುವದು. ಇಂಥ ಲೇವಾದೇವಿಯಲ್ಲಿ ನಷ್ಟಬರಲು ಕಾರಣವಿಲ್ಲ. ಬಂದು ವೇಳೆ ಏನಾದರೂ ನಷ್ಟಬಂದಾಗ್ಗೆ ಈ ರಿಜರ್ವ್ ಫಂಡಿನಿಂದಲೆ ಭರ್ತಿಮಾಡಿಕೊಳ್ಳಬಹುದಾಗಿರುತ್ತೆ. ತಮಗೆ ಪ್ರಕೃತಬಿದ್ದಾಗಲೆಲ್ಲಾ ತೊಂದರೆ ಇಲ್ಲದೆ ಮೊಬಲಗು ದೊರಕುವದು. ಇತರರಲ್ಲಿ ಹೋಗಿ ಬೇಡುವದ್ದರಿಂದ ಉಂಟಾಗುವ ಅಗೌರವವೂ ಕಾಲಹರಣವೂ ತಪ್ಪುವದು. ಈ ಸಂಘಕ್ಕೆ ಸಾಲಾಕೊಡತಕ್ಕವರು ತಾವ್ರುಗಳೀಆಗಿಯೂ ಪರಸ್ಪರ ಯೋಗ ಕ್ಷೇಮಗಳನ್ನು ತಿಳಿದವರಾಗಿಯೂ ಇರುವದರಿಂದ ಮೂಲಧನಕ್ಕೆ ಅಪೋಹವಿಲ್ಲದೆ ಸಂಘವು ಕ್ರಮವಾಗಿ ನಡೆಯುವದು. ಆದರೆ ಈರೀತಿ ಏರ್ಪಾಡುಮಾಡುವದರಲ್ಲಿ ತಾವ್ರುತಾವ್ರುಗಳು ತೆಗದುಕೊಳ್ಳುವ ಸಾಲದ ಮೊಬಲಗಿಗೆ ಮಾತ್ರ ಜವಾಬ್ದಾರರಾಗಿರುವದಲ್ಲದೆ ಇತರರು ಮಾಡುವ ಸಾಲಗಳನ್ನು ವಸೂಲ್ ಮಾಡುವದರಲ್ಲಿ ಸಂಭವಿಸುವ ನಷ್ಟಕ್ಕೂ ಗುರಿಯಾಗುವರೆಂಬ ಆಕ್ಷೇಪಣೆ ಹೇಳಬಹುದು. ಈ ವಿಷಯಚೆನ್ನಾಗಿ ಯೋಚಿಸಿದರೆ ವಾಸ್ತವವಾಗಿ ಏನೂ ಅಪಾಯ ವಿಲ್ಲೆಂಬುವದು ಕಂಡು ಬರುವದು. ಹ್ಯಾಗೆಂದರೆ—ಈ ಸಂಘದಿಂದ ಸಾಲ ಮಂಜೂರ್‌ಮಾಡತಕ್ಕ ಅಧಿಕಾರಿಗಳು ತಾವೇ ಆಗಿಯೂ ಸಾಲಾಮಾಡುವವರು ತಮ್ಮಲ್ಲೇನೇ ಸೇರಿದವರಾಗಿಯೂ ಅವರವರ ನಾಣ್ಯ ಚೆನ್ನಾಗಿ ತಿಳಿದು ಯೋಗ್ಯತೆ ಮೀರದೆ ಸಾಲಾಕೊಡುವದರಿಂದಲೂ ಕಾಲವರಿತು ತಾವೇ ವಸೂಲುಮಾಡುವದರಿಂದಲೂ ನಷ್ಟಸಂಭವಿಸಲಾರದು.

ಇಂಥ ಸಂಘದ ಆಡಳಿತಗಳು ಇನ್ನೂ ವಿಶದವಾಗಿತಿಳಿಯುವಬಗ್ಗೆ ಬ್ಯಾಂಕುಗಳ ಏರ್ಪಾಡುಬಗ್ಗೆ ನಿಬಂಧನೆಗಳನ್ನು ಮಾಡಿರುವ ಹಾಗೆ ಈಸಂಘಕ್ಕೂ ಮಾಡಬಹುದಾದ ನಿಬಂಧನೆಗಳ ಮಸೂದೆಯನ್ನು ಕೊನೆಯಲ್ಲಿ ಜಂಟಿಸಿದೆ.

ಇಂಥ ಸಂಘ ಏರ್ಪಾಡು ಆಗುವ ಪಕ್ಷದಲ್ಲಿ ಆಯಾ ಸಂಘದ ಯೋಗ್ಯತಾನುಸಾರವಾಗಿ ಸರ್ಕಾರದಿಂದ ದ್ರವ್ಯ ಸಹಾಯ ಮಾಡಲ್ಪಡುವದು. ಈ ರೀತಿ ಸಹಾಯಾರ್ಥವಾಗಿ ಕೊಡುವದಕ್ಕೆ ನಿಷ್ಕರ್ಷೆ ಮಾಡಿರುವ ಮೊಬಲಗಿನಲ್ಲಿ ಸಾಲಾಕೊಡುವದಕ್ಕೆ ಬೇಕಾದಹಾಗೆಲ್ಲ ಸಂಘದವರು ಸರ್ಕಾರದ ಖಜಾನೆಯಿಂದ ಹಣವನ್ನು ತರಿಸಿಕೊಳ್ಳಬಹುದಾ

ಗಿರುತ್ತೆ. ಸಾಲ ವಸೂಲು ಬಂದಹಾಗೆಲ್ಲಾ ದಿನಗಟ್ಲೆಕೆಲಸಕ್ಕೆ ಸಾಕಾಗುವ ಮೊಬಲಗನ್ನ ಉಳಿಸಿಕೊಂಡು ಉಳಿದ ಮೊಬಲಗನ್ನ ಸರ್ಕಾರದ ಖಜಾನೆಗೆ ಹಿಂದಕ್ಕೆ ಕೊಡಬೇಕು. ಹೀಗೆ ಮಾಡುವದರಲ್ಲಿ ಸಂಘಕ್ಕೆ, ಉಳಿದ ಮೊಬಲಗಿನ ಮೇಲಣ ಬಡ್ಡಿಯುಕೂಡಿ ಬರುವದು.

ಈ ಸಂಘದ ಪ್ರೊವಿಶಾಪಕ್ಕೊಸ್ಕರ ಇಂಡಿಯನ್ ಕಂಪೆನಿ ಆಕ್ಟಪ್ರಕಾರ ಬ್ಯಾಂಕ ಸ್ಥಾಪನೆಬಗ್ಗೆ ತಗುಲುವ ರುಸುಂಗಳಲ್ಲಿಯೂ ಸಂಘಕ್ಕಾಗಿ ಹುಟ್ಟುವದಸ್ತೈವಜುಗಳ ಮೇಲೆ ತರಬೇಕಾದ ಸ್ಟಾಂಪು ಮತ್ತು ರಿಜಿಸ್ಟ್ರೇಷನ ರುಸುಂಗಳಲ್ಲಿಯೂ ತಾಲ್ಲೂಕು ರೆವಿನ್ಯು ರಿಕಾರ್ಡುಗಳನ್ನು ಪಡಿಯುವದಕ್ಕೂ ರಿಜಿಸ್ಟ್ರೇಷನ ದಾಖಲೆಗಳನ್ನು ನೋಡುವದಕ್ಕೂ ತಗಲುವ ಖರ್ಚುಗಳಲ್ಲಿಯೂ ಯುಕ್ತಾನುಸಾರ ಸೋಡಿ ಮಾಡಲ್ಪಡುವದು. ಇದಲ್ಲದೆ ಈ ಸಂಘವನ್ನ ಏರ್ಪಡಿಸಿ ವ್ಯಾಪಾರಂಭವಲ್ಲಿ ಕೆಲಸ ನಡಿಸುವ ಬಗ್ಯೂ, ಲೆಕ್ಕಗಳ ತನಿಖೆಬಗ್ಯೂ, ಹಣವನ್ನು ಸರ್ಕಾರದ ಖಜಾನೆಗಳಲ್ಲಿ ಭದ್ರಪಡಿಸುವದಕ್ಕೂ, ಜಾಗ್ರತೆಯಾಗಿ ಹಣವಸೂಲಿ ಬಗ್ಯೂ ಸರ್ಕಾರದಿಂದ ಅನುಭವವುಳ್ಳ ಉದ್ಯೋಗಸ್ಥರ ಸಹಾಯವು ಕೊಡಲ್ಪಡುವುದು. ಸರ್ಕಾರದಿಂದ ಎಷ್ಟು ಸಹಾಯಮಾಡಿದರೂ ರೈತರಲ್ಲಿ ಐಕಮತ್ಯವಿದ್ದಹೊರತು ಈ ಬ್ಯಾಂಕುಗಳು ವೃದ್ಧಿಗೆ ಬರುವದಿಲ್ಲವೆಂಬ ಅಂಶ ಸ್ಪಷ್ಟವಾಗಿ ತಿಳಿಯಬೇಕು.

ವ್ಯವಸಾಯದ ಬ್ಯಾಂಕುಗಳ ನಿಬಂಧನೆಗಳು.

ಬ್ಯಾಂಕಿನ ಹೆಸರು.—ಈ ಬ್ಯಾಂಕು ಯಾವ ಡಿಸ್ಟ್ರಿಕ್ಟ ಯಾವ ತಾಲ್ಲೂಕು ಯಾವ ಗ್ರಾಮದಲ್ಲಿ ಸ್ಥಾಪಿಸಲ್ಪಡುವುದೋ ಆ ಸ್ಥಳದ ವ್ಯವಸಾಯದ ಬ್ಯಾಂಕ (ಆರ್ಟಲಿಮಿಟೆಡ್) ಎಂದು ಕರೆಯಲ್ಪಟ್ಟು ಮೈಸೂರು ಸೀಮೆಯ ಜಾಯಿಂಟ್ ಸ್ಟಾಕ ರಿಜಿಸ್ಟ್ರಾರ್ ಆಫೀಸಿನಲ್ಲಿ ಸನ 1866 ನೇ ಇಸವಿ 10ನೇ ನಂಬರು ಇಂಡಿಯನ್ ಕಂಪನೀಸ್ ಆಕ್ಟಿಗೆ ಅನುಸಾರವಾಗಿ ರಿಜಿಸ್ಟರ್ ಮಾಡಲ್ಪಟ್ಟು ಕ್ಲುಪ್ತವಾದ ತಾರೀಖು ಲಾಗಾಯಿತು ಜಾರೀಗೆ ಬರತಕ್ಕದ್ದು.

ಆರ್ಟಿಕಲ್ಸ ಆಫ್ ಅಸೋಸಿಯೇಷನ ಎಂದರೆ ಸಮಾಜ್ಯದ ಪತ್ರಿಕೆಯಲ್ಲಿ ರುಜು ಹಾಕಿರತಕ್ಕ ಜನಗಳು ಮತ್ತು ಈ ಕೆಳಗಿನ ರೂಲ್ಸ ಅನುಸರಿಸಿ ಮುಂದೆ ಸೇರಿಸಿ ಕೊಳ್ಳಲ್ಪಡುವ ಜನಗಳು ಈ ಬ್ಯಾಂಕಿನ ಮೆಂಬರಾಗಿ ಇರತಕ್ಕದ್ದು.

ಮೆಂಬರಾಗತಕ್ಕವರು.—ಬ್ಯಾಂಕಿರುವ ಗ್ರಾಮದ ಸರಹದ್ದಿನಲ್ಲಿ ಸರಿಯಾದ ಜಮೀನು ಹಿಡುವಳೀದಾರರಾಗಿಯೂ ವ್ಯವಸಾಯದ ಕೆಲಸವನ್ನ ಅಸಕ್ತಿಯಿಂದ ಮಾಡಿಕ್ಕೊಂಡು ಬಳ್ಳೀನಡತೆಯುಳ್ಳವರಾಗಿಯೂ ಒಬ್ಬರಿಗೊಬ್ಬರು ನಂಬಿಕೆಯಾಗಿಯೂ ಇರುವಂಥಾ ರೈತರುಗಳು ಈ ಬ್ಯಾಂಕಿನ ಮೆಂಬರಾಗಿ ಇರತಕ್ಕದ್ದು.

ಮೆಂಬರುಗಳ ಜವಾಬ್ದಾರಿ.—1. ಜವಾಬ್ದಾರಿಯು ಆರ್ಟಲಿಮಿಟೆಡ್ ಆಗಿರತಕ್ಕದ್ದು, ಅಂದರೆ ಈ ಸಂಘಕ್ಕೆ ಸೇರತಕ್ಕ ಮೆಂಬರುಗಳೆಲ್ಲಾ ಜಾಯಿಂಟ್ ಸ್ಟಾಕ ಕಂಪನೀಸ ಆಕ್ಟು ಸೆಕ್ಷನ್ ಮೇರೆ ಒಟ್ಟಾಗಿಯೇ ಆಗಲಿ ಪೃಥಕ್ಕಾಗಿಯೇ ಆಗಲಿ ಸಂಘದ ದೇಣಿಗೆ ಗುರಿಯಾಗಿರತಕ್ಕದ್ದು.

ಮೆಂಬರುಗಳ ಸಂಖ್ಯೆ.—(25) ಜನರಿಗೆ ಕಡಮೆ ಇಲ್ಲದಂತೆ ಮೆಂಬರುಗಳ ಸಂಖ್ಯೆ ಇರತಕ್ಕದ್ದು. ಈ ಬ್ಯಾಂಕಿಗೆ ಪೇಯ್ಡಪ್ ಕ್ಯಾಪಿಟಲ್ ಅಂದರೆ ಮೆಂಬರುಗಳಿಂದ ಮುಂಚಿತವಾಗಿ ವಸೂಲ್ ಮಾಡತಕ್ಕ ಮೂಲ ಧನವೇನೂಇಲ್ಲ.

ಪ್ರವೇಶಧನ.—ಪ್ರವೇಶ ಧನ ಎಂದರೆ ಮೆಂಬರಾಗಬೇಕೆಂದು ಅಪೇಕ್ಷಿಸುವ ಪ್ರತಿಯೊಬ್ಬನೂ ಎಂಟ್ರೆನ್ಸ ಫಿ (2) ರೂಪಾಯಿ ಮೇರೆ ಕೊಡತಕ್ಕದ್ದು.

ಬ್ಯಾಂಕಿನ ಆಡಳಿತ ನಡಿಸತಕ್ಕವರು.—ಮೇಲ್ಕಂಡ ಮೆಂಬರುಗಳ ಪೈಕಿ 5 ಜನರಿಗೆ ಕಡಮೆ ಇಲ್ಲದಂತೆ ಪ್ರತಿ ವರ್ಷಂ ಎಂದರೆ ಸರದಿಯ ಜನರಲ್ ಮೀಟಿಂಗಿನಲ್ಲಿ ಡೈರೆಕ್ಟರ್‌ಗಳನ್ನ ಚುನಾಯಿಸತಕ್ಕದ್ದು. ಇವರುಗಳ ಮೇಲ್ವಿಚಾರಣೆಬಗ್ಯೆ 7ರ ಲಾಗಾಯಿತು 10 ಜನ ಮೆಂಬರುಗಳನ್ನ ಕೌನ್ಸಿಲರುಗಳಾಗಿ ನೇಮಿಸತಕ್ಕದ್ದು. ಇದೇ ಮೀಟಿಂಗಿನಲ್ಲಿ ಬ್ಯಾಂಕಿನವರು ಇಷ್ಟಪಟ್ಟರೆ ಸರ್ಕಾರದ ಉದ್ಯೋಗಸ್ಥರಲ್ಲಿ 2 ಜನಕ್ಕೆ ಮೀರದಂತೆ ಯಕ್ಸಫಿಷಿಯೋ ಡೈರೆಕ್ಟರ್ ಅಥವ ಕೌನ್ಸಿಲ್ ಮೆಂಬರುಗಳಾಗಿಯೂ ನೇಮಿಸಿಕೊಳ್ಳಬಹುದು ಅಥವಾ ಸರ್ಕಾರದವರೇ ಚುನಾಯಿಸುವಹಾಗೆ ಅವರನ್ನು ಕೇಳಿಕೊಳ್ಳಬಹುದು.

ದರಖಾಸ್ತು.—ಬ್ಯಾಂಕಿಗೆ ಮೆಂಬರಾಗಲು ಅಪೇಕ್ಷಿಸುವ ಜನಗಳು ದರಖಾಸ್ತು ಮಾಡತಕ್ಕದ್ದು. ಹಾಗೆ ಬರುವ ದರಖಾಸ್ತುಗಳನ್ನು ಡೈರೆಕ್ಟರುಗಳು ತಮ್ಮ ಅಭಿಪ್ರಾಯವೊಡನೆ ಕೌನ್ಸಿಲರ್‌ಗಳಲ್ಲಿ ಕಳುಹಿಸಿಕೊಡಬೇಕು. ಅವರುಗಳಿಂದ ಅದು ಮಂಜೂರಾದಲ್ಲಿ ಅಂಥಾವರನ್ನ ಮೆಂಬರಾಗಿ ಸೇರಿಸಿಕೊಳ್ಳತಕ್ಕದ್ದು. ಇದಕ್ಕಾಗಿ ವಸೂಲಾಗುವ ಅಡ್ಮಿಷನ್ ಫೀಯನ್ನ ಜಾಸ್ತಿಮಾಡುವದಕ್ಕೂ ಯಾ ಕಮ್ಮಿ ಮಾಡುವದಕ್ಕೂ ಸಹ ಬ್ಯಾಂಕು ಜಾರೀಗೆ ಬಂದ ಎರಡುವರುಷದ ಮೇಲೆ ಸಂಘದವರಿಗೆ ಅಧಿಕಾರ ವಿರುತ್ತೆ

ಆಡಳಿತ ನಡಸತಕ್ಕ ವಿಧಾನ.—ಬ್ಯಾಂಕಿನ ನಿಬಂಧನೆಗಳನ್ನು ಅನುಸರಿಸಿ ಕೌನ್ಸಿಲರ್‌ಗಳು ಮಾಡುವ ಫಿರ್ಯಾದಿನಂತೆ ಡೈರೆಕ್ಟರುಗಳು ಕೆಲಸ ನಡಿಸತಕ್ಕದ್ದು.

ಡೈರೆಕ್ಟರ್ ಪೈಕಿ ಮೂರುಮಂದಿ, ಕೌನ್ಸಿಲರ್ ಪೈಕಿ ಐದು ಮಂದಿಗೆ ಕಡಮೆಯಿಲ್ಲದೆ ಕೋರಂ ಆಗಿ ಇರತಕ್ಕದ್ದು. ಡೈರೆಕ್ಟರುಗಳು ವಾರಕ್ಕೆ ಎರಡಾವರ್ತಿ ಕಮ್ಮಿಯಿಲ್ಲದಂತೆ ಬ್ಯಾಂಕ್‌ಹೌಸಿಗೆ ಬಂದು ಬ್ಯಾಂಕಿನ ಎಲ್ಲಾಬಾಬಿನ ಕೆಲಸಗಳನ್ನೂ ತನಿಖೆಮಾಡಿ ಮಿನಿಟ್ ಬುಕ್ಕಿನಲ್ಲಿ ಷರಾಬರಿಯತಕ್ಕದ್ದು. ಕೌನ್ಸಿಲರ್‌ಗಳು ತಿಂಗಳಿಗೆ ಒಂದಾವರ್ತಿಮೇಲ್ವಿಚಾರಣೆ ಕೆಲಸ ಅಂದರೆ ಕೆಳಿದ ವಿಷಯಂಗಿನಿಂದ ಈಚೆಗೆ ಸಂಘದಲ್ಲಿ ನಡೆದ ವಿಶಿಷ್ಟ ಲೇವಾದೇವಿಯನ್ನು ತನಿಖೆಮಾಡಿ,ಮುಂದೆ ನಡಿಯತಕ್ಕ ಅಮಲ್‌ಗಳಿಗೆ ತಕ್ಕ ಸಲಹೆಗಳನ್ನೆ ಬರಿಯತಕ್ಕದ್ದು.

ಈ ಸಂಘದ ಕೆಲಸ.—ಸರ್ಕಾರದಿಂದ ಸಾಲೀಯಾನ ಶೇಕಡ ನಾಲ್ಕುರೂಪಾಯಿನ ದರದ ಬಡ್ಡಿಯಂತೆ ಸಾಲವಾಗಿ ಕೊಡಲ್ಪಡುವ ಡಿಪಾಜಿಟ್ ಮೊಬಲಗಿನಿಂದಲೂ ಈ ಸರ್ಕಾರದಂತೆ ಬ್ಯಾಂಕಿನ ಬಡ್ಡಿಯನ್ನೆ ತಗೆದುಕ್ಕೊಳ್ಳಲು ಒಪ್ಪಿ ಇತರರು ಕೊಡುವ ಡಿಪಾಜಿಟ್ ಮೊಬಲಗಿನಿಂದಲೂ ಬ್ಯಾಂಕಿನ ಲೇವಾದೇವಿಯು ನಡಿಸಲ್ಪಡತಕ್ಕದ್ದು.

ಲೇವಾದೇವಿ ಕ್ರಮ.—ಈ ಸಂಘದಲ್ಲಿ ಸೇರಿರುವ ಮೆಂಬರ್‌ಗಳಲ್ಲಿಯೇ ಈ ಕೆಳಗೆ ನಮೂದಿಸುವ ರೀತಿ ಲೇವಾದೇವಿ ನಡಿಸತಕ್ಕದ್ದು ಮತ್ತು ಸಾಲಕೊಡುವ ಕಾಲದಲ್ಲಿಯೇ ಪೂರಾ ಬಡ್ಡಿಯನ್ನು ಕಟಾಯಿಸಿಕೊಳ್ಳತಕ್ಕದ್ದು.

1. ಸ್ಥಿರಾಧಾರ.
2. ಜಾಯಿಂಟ್ ಪ್ರಾಮಿಸರಿ.
3. ಜಾಯಿಂಟ್ ಕಂತು.
4. ಮೂಬಾದಲೆ.

ಈ ಮೇರೆ ನಾಲ್ಕು ವಿಧವಾಗಿ ನಡಿಸತಕ್ಕದ್ದು.

1—3ನೇ ಕಲಂನಂತೆ ಕೊಡತಕ್ಕ ಸಾಲಕ್ಕೆ ಸಾಲೀಯಾನಾ ಶೇಕಡಾ 6 ರೂಪಾಯಿನಂತೆಯೂ 2ನೇದಾದ ಜಾಯಿಂಟ್ ಪ್ರಾಮಿಸರಿಗೆ ನೂರು ರೂಪಾಯಿನೊಳಗೆ ಇದ್ದಲ್ಲಿ ಶೇಕಡಾ 7 ರೂಪಾಯಿನಂತೆಯೂ ಅದಕ್ಕೆ ಜಾಸ್ತಿ ಆಗಿದ್ದಲ್ಲಿ ಶೇಕಡಾ 6 ರೂಪಾಯಿನಂತೆಯೂ 4ನೇದಾದ ಮೂಬಾದಲೆ ಮೊಬಲಗಿಗೆ ದಿನ 1ಕ್ಕೆ 20 ರೂಪಾಯಿಗಳಿಗೆ ಬಂದು ಪೈ ನಂತೆಯೂ ಬಡ್ಡಿ ವಸೂಲ್ಮಾಡತಕ್ಕದ್ದು.

ಇದರಲ್ಲಿ ಸ್ಥಾವರ ಸ್ವತ್ತುಗಳ ಆಧಾರದ ಮೇಲೆ ಆಥವ ಜಾಮೀನಿನ ಮೇಲೆ ಒಬ್ಬ ಇಸಮ್ಮಿಗೆ (500) ರೂಪಾಯಿಗಳಿಗೆ ಜಾಸ್ತಿ ಇಲ್ಲದಂತೆ 15 ತಿಂಗಳ ವಾಯಿದೆಗೆ ಮೀರದೆ ಸಾಲಾ ಕೊಡಬಹುದು. ಸ್ವತ್ತಿನ ಅಂದಾಜು ಪೈಕಿ $\frac{3}{4}$ ಭಾಗಕ್ಕೆ ಹೆಚ್ಚದಂತೆ ಸಾಲ ಕೊಡತಕ್ಕದ್ದು.

ಪ್ರಾಮಿಸರಿ.—ಈ ಬಾಬಿನ ಲೇವಾದೇವಿಯಲ್ಲಿ ಮೇಲ್ಕಂಡಂತೆ ಹಣ ತೆಗೆದುಕ್ಕೊಳ್ಳತಕ್ಕ ಆಸಾಮಿಯಿಂದ ಖಾತರಿ ಜಾಮೀನ್ ತೆಗೆದುಕೊಂಡು (500) ರೂಪಾಯಿಗೂ 6 ತಿಂಗಳ ವಾಯಿದೆಗೂ ಮೀರದಂತೆ ಸಾಲಾಕೊಡಬಹುದು.

ಕಂತು.—ಸ್ಥಿರಾಧಾರದ ಕಂತು ಯಾ ಜಾಯಿಂಟ್‌ಗಳ ಮೇಲೆ ತೆಗಿಯಲ್ಪಡುವ ಕಂತುಗಳಲ್ಲಿ 500 ರೂಪಾಯಿನವರಿಗೆ ಹತ್ತು ಕಂತುಗಳಿಗೆ ಮೀರದಂತೆ ಲೇವಾದೇವಿ ನಡಿಸತಕ್ಕದ್ದು.

ಮೂಬಾದಲೆ.—ಫೀ ಇಸಂಗೆ ಯಾ ಜಂಟಿಗಳಿಗೆ 25 ರೂಪಾಯಿಗಳಿಗೂ 90 ರೋಜಿನ ವಾಯಿದೆಗೂ ಮೀರದಂತೆ ಸಾಲ ಕೊಡಬಹುದು. ಯಾವ ಸಾಲವನ್ನೂ 15 ತಿಂಗಳಿಗೆ ಮೀರದಂತೆ ಕೊಡಬಹುದು ಯಾ ರಿನ್ಯೂಮಾಡಬಹುದು.

ಯಾವ ಮೆಂಬರಿನ ಜವಾಬ್ದಾರಿಯು ಅವನು ಕೊಡತಕ್ಕ ಸಾಲದ ಮೊಬಲಗು ಮತ್ತು ಇತರರಿಗಾಗಿ ಜಾಮೀನಾಗಿರುವ ಮೊಬಲಗು ಸೇರಿ 1,000 (ಒಂದು ಸಾವಿರ) ರೂಪಾಯಿಗಳಿಗೆ ಮೀರಕೂಡದು.

ಸಾಲಾ ಪಡಿಯತಕ್ಕ ಕ್ರಮ.—ಸಾಲಾ ತೆಗಿಯಬೇಕಾದ ಮೆಂಬರು ಲಿಖಿತಮೂಲ್ಕವಾಗಿಯೇ ಆಗಲಿ ಜುಬಾನಿಯಾಗಿಯೇ ಆಗಲಿ ಡೈರೆಕ್ಟರಗಳಲ್ಲಿ ಸಾಲಕ್ಕೆ ದರಖಾಸ್ತು ಮಾಡಬಹುದು. ಅಂಥಾ ಹೇಳಿಕೆಗಳನ್ನ ಡೈರೆಕ್ಟರುಗಳು ನೋಟ್ ಮಾಡಿಕೊಳ್ಳುವದರಲ್ಲಿ ಸದರಿ ಸಾಲವು ಯಾವ ಕೆಲಸಕ್ಕಾಗಿ ತೆಗೆದುಕೊಳ್ಳಲ್ಪಡುತ್ತೆ ಎಂಬದನ್ನೂ ಇವನ ಮತ್ತು ಜಾಮೀನ್‌ದಾರನ ಯೋಗ್ಯತೆ ಆಪವಾಲ್ ಮುಂತಾದ್ದನ್ನೂ ಸಹ ಸರಿಯಾಗಿ ವಿವರಿಸಬೇಕು.

ಸಾಲಾ ತೆಗೆದುಕೊಳ್ಳುವವನು ಮತ್ತು ಜಾಮೀರ್ದಾರನು ಸಹಾ ತಮ್ಮ ಖಾತರದಾರಿ ಆಸ್ತಿ ಮುಂತಾದ ತಪಶೀಲ್‌ಗಳನ್ನು ಡೈರೆಕ್ಟರು ಕೇಳಿದಾಗ್ಗೆ ನಿಜವಾಗಿ ಹೇಳಬೇಕು. ಇದರಲ್ಲಿ ಏನಾದರೂ ಸುಳ್ಳು ಆಥವಾ ಲೋಪಬಂದೆ ಪಕ್ಷದಲ್ಲಿ ಆದಕ್ಕೆ ಅವರು ಜವಾಬ್ದಾರ್ರಾಗಿರತಕ್ಕದ್ದು. ಇದರ ನಿಜತ್ವದ ವಿಚಾರದಲ್ಲಿ ಡೈರೆಕ್ಟರು ಗಳು ಸಾಧ್ಯವಾದ ಮಟ್ಟಿಗೆ ವಿಚಾರಮಾಡಿ ಸಾಲಾ ಮಂಜೂರ್ಮಾಡಬೇಕು.

ಇದರಲ್ಲಿಡಬೇಕ್ಕಾದ ಲಿಖ್ಖಗಳು.—ಮುಂದೆ ಏರ್ಪಡಿಸಲ್ಪಡುವ, ಷಿಡ್ಯೂಲ್‌ನಲ್ಲಿ ನಮೂದಾಗುವ ಲಿಖ್ಖಗಳು ಕ್ರಮವಾಗಿ ಈ ಸಂಘದಲ್ಲಿ ಇಡಲ್ಪಡತಕ್ಕದ್ದು. ಪ್ರತಿ ಟರಂಗು ಗವರ್ನ್‌ಮೆಂಟ್ಟಿನಿಂದ ಮೊಕರೂರ್ ಆಗಬಹುದಾದ ಆಡಿಟರುಗಳಿಂದ ಈ ಲಿಖ್ಖಗಳು ಚಕ್ಕು ಮಾಡಲ್ಪಡತಕ್ಕದ್ದಾಗಿವೆ.

ಬ್ಯಾಂಕಿನ ಕಿಲ್ಲು.—ಟೈಟಲ್ ಡೀಡುಗಳು ಮುಂತಾದ ದಸ್ತಾವೇಜುಗಳು ಬ್ಯಾಂಕ್ ಹೌಸ್‌ನಲ್ಲಿಯೇ ಇರತಕ್ಕದ್ದು. ಸರ್ಕಾರದಿಂದ ಅಧಿಕಾರ ಹೊಂದಿದ ಆಫೀಸರುಗಳು ಮತ್ತು ಬ್ಯಾಂಕಿನ ಮೆಂಬರುಗಳು ಈ ಲಿಖ್ಖಗಳನ್ನೂ ಮತ್ತು ಟೈಟಲ್ ಡೀಡ್ ಮುಂತಾದ ದಸ್ತಾವೇಜುಗಳನ್ನೂ ಕ್ಯಾಷ್ ಹಾಜರಿಯನ್ನು ಸಹಾ ಇನಸ್ಪೆಕ್ಷ್ ಮಾಡಬಹುದು.

ಬಡ್ಡಿದು ವಿಲೇವಾರಿ.—ಸರ್ಕಾರದಿಂದಲೂ ಇತರರಿಂದಲೂ ಬ್ಯಾಂಕು ಮಜಕೂರಿಗೆ ಬಂದಿರುವ ಮೊಬಲಗಿಗೆ ಟರಂ ಪ್ರಕಾರವಾಗಿ ಆಗಲಿ ಯಾ ಡಿಪಾಜಿಟ್‌ದಾರ್ರಲ್ಲಿ ಒಪ್ಪಿಕ್ಕೊಂಡಿರುವ ವಾಯಿದೆಯಲ್ಲಿ ಆಗಲಿ ಬಡ್ಡಿಯನ್ನು ಪಾವತಿ ಮಾಡಬೇಕು.

ಸಿಬ್ಬಂದಿಗಾಗಿ ವಿಧಿಸಿರುವ ಖರ್ಚನ್ನು ಆಯಾ ಮಾಹೆ ಆಖೈರಿನಲ್ಲಿ ಮಾಡಿಕೊಳ್ಳತಕ್ಕದ್ದು.

ಸಾಲಾ ಪಡೆದ ಮೆಂಬರು ಪಾವತಿಬಗ್ಗೆ ಮಾಡಿಕೊಂಡ ವಾಯಿದೆಗೆ ತಪ್ಪುವ್ವವೆ ಮೊಬಲಗು ವಾಪಸು ಮಾಡಿದ ಪಕ್ಷದಲ್ಲಿ ಬಾಕಿ ಉಳಿಯುವ ರೋಜುಗಳಿಗೆ ಶೇಕಡಾ ಸಾಲೀಯಾನಾ ನಾಲ್ಕು ರೂಪಾಯಿನಂತೆ ಆಗುವ ಬಡ್ಡಿಯನ್ನು ವಾಪಸು ಮಾಡತಕ್ಕದ್ದು.

ಬ್ಯಾಂಕಿನಲ್ಲಿ ಹಾಜರಿರಬೇಕಾದ ಮೊಬಲಗು.—ಗೊತ್ತಾದ ಹಾಜರಿರಬೇಕಾದ ಮೊಬಲಗಿಂತಾ ಜಾಸ್ತಿಯಾಗಿ ಉಳಿಯುವ ಎಲ್ಲಾ ಮೊಬಲಗನ್ನು ಸರಕಾರಕ್ಕೆ ವಾಪಸು ಜಮಾ ಕೊಡತಕ್ಕದ್ದು.

ಸಾಲಾ ತೆಗೆಯುವ ಉದ್ದೇಶ.—ಸಾಲಾ ಕೊಡುವದಕ್ಕೆ ಮುಂಚೆ ಯಾವ ಉದ್ದೇಶಕ್ಕಾಗಿ ಅದು ತೆಗೆಯಲ್ಪಡುತ್ತೊ ಅದನ್ನ ವಿಚಾರಿಸಿಕ್ಕೊಳ್ಳಬೇಕಲ್ಲದೆ ಸದರಿ ಉದ್ದೇಶಕ್ಕೆ ಈ ಹಣವು ವಿನಿಯೋಗಿಸಲ್ಪಡದೆ ಇದ್ದರೆ ಬಂದು ತಿಂಗಳ ನೋಟೀಸಿನಿಂದ ಆ ಸಾಲವು ವಸೂಲ್ ಮಾಡಿಕ್ಕೊಳ್ಳುವಂತಿರತಕ್ಕದ್ದು.

ಈ ಉದ್ದೇಕವು ಯಂಥಾದ್ದಂದರೆ.—ಗೊಬ್ಬರಾ ಬೀಜಾ ದನಕರುಗಳು ಮತ್ತು ಜಿರಾಯಿತು ಬಗ್ಗೆ ಬೇಕಾದ ಇತರ ಅಜಬಾಬು ಯಾನೆ ಸಲಕರಣೆಗಳನ್ನು ಕೊಂಡು ಕೊಳ್ಳುವದಕ್ಕೂ ಸಾಗುವಳಿಬಗ್ಗೆ ಬೇಕಾದ ಕೂಲಿ ಮತ್ತು ಇತರ ಲಾಗವಡು ಕಂದಾಯ ಪಾವತಿ ಸಾಗುವಳಿ ಆಯಾಂ ಕಾಲದಲ್ಲಿ ಸಾಗುವಳಿದಾರನ ಜೀವನಕ್ಕಾಗಿಯೂ ಆಧಾರ ಯಾ ಭೋಗ್ಯಸ್ವತ್ತನ್ನ ಬಿಡಿಸಿಕೊಳ್ಳುವದು ಇದೇ ಮೊದಲಾದ ಕಾರ್ಯಗಳಿಗೆ ಮಾತ್ರ ಉಪಯೋಗಿಸತಕ್ಕದ್ದಾಗಿದೆ. ವಾಯಿದೆ ಒಳಗೆ ಸದರಿ ಸಾಲಾ ತೀರಿಸುವದಕ್ಕೆ ಸರಿಯಾದ ರಹಾ ತೋರಿದ ವಿನಹ ಸಾಲವೇ ಕೊಡತಕ್ಕದಲ್ಲಾ.

ಷರತ್ತಿಗೆ ವಿರೋಧವಾಗಿ ನಡದವನಿಗೆ ದಂಡನೆ.—ಎಲ್ಲಾ ಲೇವಾದೇವಿಗೆಳಲ್ಲಿಯೂ ಷರತ್ತಿಗೆ ವಿರೋಧವಾಗಿ ನಡೆದ ಸಂದರ್ಭದಲ್ಲಿ ಲೇಣೇದಾರನು ಪುನಹಾ ಸಾಲಾಪಡೆಯಲು ಅರ್ಹನಲ್ಲವೆಂಬ ಅಂಶವನ್ನು ಖಂಡಿತ ಜಾರಿಯಲ್ಲಿರತಕ್ಕದ್ದು.

ರಿಜರ್ವ್ಡ್ ಫಂಡ್.—ಈ ಸಂಘದ ಸಿಬ್ಬಂದಿ ಖರ್ಚು ಡಿಪಾಜಿಟ್ ಮೊಬಲಗಿನ ಬಡ್ಡಿ ವಜಾ ಜಾತಾ ಉಳಿಯುವ ವಿಶಿಷ್ಟ ನಫಾ ಮೊಬಲಗು ರಿಜರ್ವ್‌ಫಂಡಿಗೇನೆ ದಾಖಲಾಗತಕ್ಕದ್ದು.

ಈ ಫಂಡು ಲೇವಾದೇವಿಯಲ್ಲಿ ಅವಶಾತ್ ಸಂಭವಿಸುವ ನಷ್ಟದ ಭರ್ತಿಗಾಗಿ ಉಪಯೋಗಿಸತಕ್ಕದ್ದು. ಈ ಬ್ಯಾಂಕ್ ವೈಂಡಪ್ ಯಾನೆ ಪೂರಾ ವಜಾ ಆದರೆ ಈ ಮೊಬಲಗು ಸಂಘದವರಿಗೆ ಸಲ್ಲತಕ್ಕದ್ದಲ್ಲ. ಇದೇ ರೀತಿಯಾಗಿ ಜಾರಿಯಲ್ಲಿ ಇರುವ ಆಥವಾ ಮುಂದೆ ಸ್ಥಾಪಿಸಲ್ಪಡುವ ಸಂಘಕ್ಕೆ ಆಗಲಿ, ಇಲ್ಲವೆ ಬ್ಯಾಂಕ್ ಸರಹದ್ದಿನೊಳಗೆ ಇರುವ ಇತರ ಧರ್ಮ ಕೆಲಸಕ್ಕಾಗಲಿ ಸಂಘದವರು ಉಪಯೋಗಿಸಿತಕ್ಕದ್ದು.

ಈ ಸಂಘದವರು ತಾವು ಮಾಡುವ ಮಿಹನತ್ತಿಗಾಗಿ ಏನೊಂದು ವರಮಾನವನ್ನೂ ಅಪೇಕ್ಷಿಸಕೂಡದು. ಸಿಬ್ಬಂದಿ ಮುಂತಾದ ಖರ್ಚು ತಕ್ಕಮಟ್ಟಿಗೆ ಮಿತವಾಗಿರಬೇಕು.

ಮಿಟಿಂಗ್ ನಡಿಸತಕ್ಕ ಕಾಲ.—ಪ್ರತಿ ಆರು ತಿಂಗಳಲ್ಲಿಯೂ ಬ್ಯಾಲನ್ಸ್‌ಷೀಟ್ ತಯ್ಯಾರ್ಮಾಡಿ ಜನರಲ್ ಮಿಟಿಂಗ್ ನಲ್ಲಿ ಮುಂಜೂರ್ಮಾಡಿಸತಕ್ಕದ್ದು.

ಪ್ರಾಪೋಜಿಷನ್ ನೋಟೀಸ್.—ಕೌನ್ಸಿಲ್ ಮೆಂಬರು ಯಾವದಾದರು ಬಂದು ಹೊಸ ಪ್ರಾಪೋಜಿಷನ್ ಮಾಡಬೇಕಾಗಿದ್ದರೆ ಮಿಟಿಂಗ್ ಸೇರುವದಕ್ಕೆ ಒಂದು ವಾರ ಮುಂಚಿಯೇ ಎಲ್ಲಾ ಮೆಂಬರುಗಳಿಗೂ ನೋಟೀಸ್ ಕೊಡಬೇಕು.

ಜನರಲ್ ಮಿಟಿಂಗಿನಲ್ಲಿ ಯಾವ ಮೆಂಬರಾದರೂ ಏನಾದರೂ ಪ್ರಪೋಜ್ ಮಾಡಬೇಕಾಗಿದ್ದಲ್ಲಿ ಮಿಟಿಂಗ್ ಆಗುವದಕ್ಕೆ 15 ದಿವಸ ಮುಂಚೆ ನೋಟೀಸ್ ಕೊಡಬೇಕು.

ಮೆಂಬರುಗಳು ರಿಟೈರ್ ಆಗುವ ವಿಷಯ.—ಯಾವ ಮೆಂಬರಾದರೂ ಬ್ಯಾಂಕಿನಿಂದ ಬಿಡುಗಡೆಯಾಗಲು ಇಷ್ಟವಿದ್ದಲ್ಲಿ ಡೈರೆಕ್ಟರಲ್ಲಿ ರಾಜೀನಾಮಾ ಹಾಜರ್ಮಾಡಿ ಅದಕ್ಕೆ ಕೌನ್ಸಿಲರುಗಳ ಮುಂಜಾರಾತ್ತಿ ಪಡಿಯಬೇಕು. ಆ ರಾಜೀನಾಮ ಅಂಗೀಕಾರವಾದಲ್ಲಿ ರಾಜೀನಾಮಾ ತಾರೀಖಿನಿಂದ ಮುಂದೆ ನಡೆಯುವ ಲೇವಾದೇವಿಗಳಿಗೆ ಬಿಟ್ಟ ಮೆಂಬರು ಜವಾಬ್ದಾರನಾಗಿರುವದಿಲ್ಲ. ಹಿಂದೆ ನಡೆದಿರುವ ಲೇವಾದೇವಿ ವಿಚಾರದಲ್ಲಿ ಎರಡು ವರುಷದವರಿಗೂ ಜವಾಬ್ದಾರನಾಗಿರತಕ್ಕದ್ದು. ಅಂಥಾ ರಾಜೀನಾಮೆ ಅಂಗೀಕರಿಸಲು ಕೌನ್ಸಿಲರಿಗೆ ಇಷ್ಟವಿಲ್ಲದ ಪಕ್ಷಕ್ಕೆ ಬಂದು ಜನರಲ್ ಮಿಟಿಂಗ್ ಮಾಡಿ ಅಲ್ಲಿನ ರೆಜೊಲ್ಯೂಷನ್ ಯಾನೆ ತೀರ್ಮಾನದಂತೆ ನಡಿಸತಕ್ಕದ್ದು. ಅಂಥಾ ಮೆಂಬರು ಸಂಘ ಬಿಡುವದರಲ್ಲಿ ಸಂಘದ ಒಟ್ಟು ಸಂಖ್ಯೆ ಪೈಕಿ ಐದರಲ್ಲಿ ಬಂದು ಹಿಸ್ಸೆ ಜನಗಳು ಒಪ್ಪದೇ ಇದ್ದಲ್ಲಿ ಸಂಘವನ್ನು ವೈಂಡಪ್ ಯಾನೆ ಮುಕ್ತಾಯ ಮಾಡಬಹುದು.

General Records.

Please file with Correspondence ending with Pro No 32 dated 30th March 1904 re establishment of an Agricultural Bank at Dalakadi Serampapatam Taluq Nellore

4/9/02

To Revenue Board.

When referring to the Land Settlement Proceedings of Revenue Boards among the entries of letters &c Land & Records the above mentioned Proceedings are not forthcoming.

PLB

B/9/02

(General Serial No. 30.)

6480/2

1894. G 2525 1/2



From The Deputy Commissioner Mysore District

To

The Chief Secretary to the Dewan of Mysore.

Dated 22nd November 1894.

Despatched

Received (3)

Enclosures No.

General No. 536

No.

Requesting that sanction may be accorded to the institution of an Agricultural Bank at Palhalli.

Put up

Regd please. The draft is being copied Dft 8/12

No. 536

Enclosures No. 1

DEPUTY COMMISSIONER'S OFFICE,
MYSORE DISTRICT;

Dated Mysore, 22ᴰ November 1894.

From A. Rungarami Iyengar, Esquire, B.A. B.L.
Deputy Commissioner,
Mysore District.

To

The Chief Secretary to the Dewan of Mysore. (3)

SIR,

I have the honor to state that some of the respectable ryots of Talkalli, in the Seringapatam Taluk, have resolved to form an Agricultural Bank, on the lines sketched by the Dewan, in his last Dassara speech. They met on the 18th instant, at Talkalli, and unanimously resolved to institute the Bank, and adopted the rules and memorandum of association, at the same meeting. The Proceedings embodying the same, and signed by all the members, is submitted herewith.

2. There are now 16 members on the rolls, and the rules provide for lending not more

than 1000 Rupees to each member. The entrance fee has been fixed at a nominal amount, viz: 4 annas. The rates of interest fixed are 7 Rs. per cent per annum for loans not exceeding 1000 Rs, and 6 per cent for larger sums, to be recovered at the time of repayment. In other respects, the rules are the same as those contained in the Kanarese draft rules, circulated with the Dharwar address. The Amildar, reports that the members are respectable, and solvent, and that a sum of Rupees 16,000 may be lent to them without any risk.

3. I beg that the Proceedings may be forwarded to the Registrar, of Joint Stock Companies, for registration, and that sanction may be accorded to the inobilitation of the Banks, by Government, from time to time, sums of money not exceeding in the aggregate, Rs. 16,000 at any time.

4 I further request that the Government will

will be pleased to grant the concessions promised in the address, for the remission of stamp, registration and other dues, and for periodical audit by Government servants.

I have the honor to be,

Sir,

Your most obed. servant,

Deputy Commissioner

Mysore District.

Compd:
Udy

Proceedings of a meeting held on the 18th November 1894, at Palhalli Village, Seringapatam Taluk, for the establishment of an Agricultural Bank at Palhalli, in conformity with the rules published in the Mysore Gazette, as per scheme proposed on the subject by the Dewan at this year's Dasara Meeting.

೧. ಈ ವರ್ಷದ ದಸರಾಮಿಟಿಂಗಿನಲ್ಲಿ ಅಗ್ರಿಕಲ್ಚರಲ್ ಬ್ಯಾಂಕ್ ವಿಷಯವಾಗಿ ಮು॥ರಾ॥ ದಿವಾ॥ ಸಾಹೆಬರವರು ಅಪ್ಪಣೆ ಕೊಟ್ಟ ಪ್ರಕಾರಾ ರೂಲ್ಸಾಗಿ ಮೈಸೂರು ಗಜೇಟಿನಲ್ಲಿ ಪ್ರಾಯಿಪ್ಮಾಡಿರುವದಕ್ಕನುಸಾರವಾಗಿ ಶ್ರೀರಂಗಪಟ್ಣ ತಾಲ್ಲೂಕು ಪಾಲಹಳ್ಳೀ ಗ್ರಾಮದಲ್ಲಿ ವ್ಯವಸಾಯದ ಬ್ಯಾಂಕು ಸ್ಥಾಪಿಸಲು ನದರಿ ಪಾಲಹಳ್ಳಿಗ್ರಾಮದಲ್ಲಿ 1894ನೇ ಇಸವಿ ನವಂಬರು 18ಲ್ಲು ಮಾಡಲ್ಪಟ್ಟ ವಿಷಿಟಿಂಗ್‌ಯಾನೆಸವಾಖ್ಯ ಪತ್ರಿಕೆ.

Number of Members present—16.

All present consented to the proposal made by M. R. Ry. Venkatkrishnappah that M. R. Ry. Sahukar Papanna should preside at the meeting.

ಹಾಜರಿದ್ದ ಮೆಂಬರಗಳ ಸಂಖ್ಯೆ—16.

ಈ ಸಭೆಗೆ ಮು॥ ರಾ॥ ಸಾಹುಕಾರ್ ಪಾಪಂಣನವರು ಅಗ್ರಾಸನಾಧಿಪತಿಗಳಾಗಬೇಕೆಂದು ಮು॥ ರಾ॥ ವೆಂಕಟ ಕ್ರಿಷ್ಣಪ್ಪನವರು ಹೇಳಿದ್ದನ್ನು ಎಲ್ಲರು ಒಪ್ಪಿದರು.

1. *Name.*—The Bank shall be called the Agricultural Bank of Palhalli of the Seringpatam Taluk of the Mysore District, and registered in the Mysore Joint Stock Companies Registrar's Office in accordance with the Indian Companies Act X of 1866 and come into operation from the 19th day of November 1894.—Accepted.

1. ಹೆಸರು.—ಮೈಸೂರು ಡಿಸ್ಟ್ರಿಕ್ಟ್ ಶ್ರೀರಂಗಪಟ್ಣ ತಾಲ್ಲೂಕು ಪಾಲಹಳ್ಳಿ ವ್ಯವಸಾಯ ಅಭಿವೃದ್ಧಿ ಬ್ಯಾಂಕ್ ಎಂದು ಕರೆಯಲ್ಪಟ್ಟು ಮೈಸೂರು ಸೀಮೆಯ ಜಾಯಿಂಟ್ ಸ್ಟಾಕ್ ರಿಜಿಸ್ಟ್ರಾರ್ ಆಫೀಸನಲ್ಲಿ 66ನೇ ಇಸವಿ 10ನೇ ನಂಬರು ಇಂಡಿಯನ್ ಕಂಪನೀಸ್ ಆಕ್ಟಿಗೆ ಅನುಸಾರವಾಗಿ ರಿಜಸ್ಟರ್ ಮಾಡಲ್ಪಟ್ಟು ಈ ನವಂಬರು 19ನೇ ತಾರೀಖಿನಿಂದಾ ಜಾರೀಯಲ್ಲಿ ಬರತಕ್ಕದ್ದು.—ಒಪ್ಪಿದರು.

